


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 Issue : 245 Thursday 06-06-2024 E-mail : maruti.b.hosamani76@gmail.com Page: 4 Price : Rs. 1/-


## ಲೋಕಸಭಾ ಅಭ್ಯರ್ಥಿ ತುಕಾರಾಮ್ ಅವರ ಗೆಲುವಿನ ಸಂಭ್ರಮಾಚರಣೆ ಕೂಡ್ಲಿಗಿಯ ರಾಜೀವ್ ಗಾಂಧಿನಗರ

**ಕೂಡ್ಲಿಗಿ:** ಬಳ್ಳಾರಿ ಲೋಕಸಭಾ ಕ್ಷೇತ್ರದ ಜಿದ್ದಾಜಿದ್ದಿನ ಕಣವಾಗಿ ಏರ್ಪಟ್ಟಿದ್ದ ಲೋಕಸಭಾ ಅಭ್ಯರ್ಥಿ ಈ ತುಕಾರಾಮ್ ಅವರು ಗೆಲುವು ಸಾಧಿಸಿರುವುದು ಎಲ್ಲ ಕಾರ್ಯಕರ್ತರಿಗೆ ಅತೀವ ಸಂತೋಷವನ್ನುಂಟು ಮಾಡಿದೆ ಕಾಂಗ್ರೆಸ್ ಪಕ್ಷದ ಎಲ್ಲಾ ಕಾರ್ಯಕರ್ತರು ಮತ್ತು ಪದಾಧಿಕಾರಿಗಳು ಒಗ್ಗಟ್ಟಿನಿಂದ ಕೆಲಸ ಮಾಡಿ ಮತ್ತು ಶಾಸಕರ ನಿರ್ದೇಶನದಂತೆ ಕೆಲಸ ಮಾಡಿ ಈ ತುಕಾರಾಮ್ ಅವರ ಗೆಲುವಿಗೆ ಮುನ್ನುಡಿಯನ್ನು ಬರೆದಿದ್ದಾರೆ ಕೂಡ್ಲಿಗಿ ರಾಜೀವ್ ಗಾಂಧಿನಗರದ ಕಾರ್ಯಕರ್ತರು ಪಟಾಕಿ ಸಿಡಿಸುವುದರ ಮೂಲಕ ಎಲ್ಲಾ ಕಾರ್ಯಕರ್ತರು ಸಂಭ್ರಮಾಚರಣೆಯನ್ನು ಆಚರಿಸಿದರು ಈ ಸಂದರ್ಭದಲ್ಲಿ ಕಾಲ್ಚಟ್ಟಿ ಕೃಷ್ಣ ಮಾತನಾಡಿ ನಮ್ಮ ಶಾಸಕರ ಸಲಹೆಯಂತೆ ಎಲ್ಲರೂ ಒಗ್ಗಟ್ಟಾಗಿ ಶ್ರಮಿಸಿ ಈ ಬಾರಿ ಕಾಂಗ್ರೆಸ್ ಪಕ್ಷಕ್ಕೆ ಜಯಭೇರಿ ಬಾರಿಸಿರುವುದು ಅತೀವ ಸಂತೋಷವನ್ನುಂಟು ಮಾಡಿದೆ ಎಂದರು.



ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವುದನ್ನು ಈ ಬಾರಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಕೆಲಸ ಮಾಡಿ ತೋರಿಸಿ ಕೊಟ್ಟಿದ್ದೇವೆ ಎಂದು ಕಾರ್ಯಕರ್ತರು ಮಾತನಾಡಿದರು. ಇದೇ ರೀತಿಯಾಗಿ ಮುಂದಿನ ದಿನಗಳಲ್ಲಿ ಸರ್ವತೋಮುಖ ಅಭಿವೃದ್ಧಿಗೆ ಲೋಕಸಭಾ ಸದಸ್ಯರನ್ನು ಕೂಡ್ಲಿಗಿ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುವಂತೆ ನಾವು ಜೊತೆಗೂಡಿ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇವೆ ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಕಾಲ್ ಚಟ್ಟಿ ಕೃಷ್ಣಪ್ಪ ನಾಗೇಂದ್ರ ರಾಜೀವ್ ಗಾಂಧಿನಗರ ಕಾಂಗ್ರೆಸ್ ಪಕ್ಷದ ಪಟ್ಟಣ ಪಂಚಾಯಿತಿ ಪರಾಜಿತ ಅಭ್ಯರ್ಥಿ ವ್ಯವಸಾಯ ಸೇವಾ ಸಹಕಾರ ಸಂಘ ಕೂಡ್ಲಿಗಿ ನಿರ್ದೇಶಕರು ಆದ ನಲ್ಲ ಮುತ್ತಿ ದುರ್ಗೇಶ್ ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ನವೀನ್ ತಾಲೂಕು ಉಪಾಧ್ಯಕ್ಷ ಕಾಂಗ್ರೆಸ್ ಸೇವೆದಳ ಜಿಂಕಲರ್ ನಾಗೇಶ್ ಮುಖಂಡರಾದ ಸೀನಣ್ಣ ತಿಮ್ಮಪ್ಪ ಸಿದ್ದಪ್ಪ ನಿಂಗಜ್ಜ ಇನ್ನೂ ಹೆಚ್ಚು ಕಾಂಗ್ರೆಸ್ ಮುಖಂಡರು ಹಾಜರಿದ್ದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ. ಎಸ್.ವೀರೇಶ್. ಕಾನಾ ಹೊಸಹಳ್ಳಿ**

## ಕಲಕೇರಿ ಗ್ರಾಮದಲ್ಲಿ ವಿಶ್ವ ಪರಿಸರ ದಿನಾಚರಣೆ



**ಕಲಕೇರಿ :** ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲೂಕಿನ ಕಲಕೇರಿ ಗ್ರಾಮದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಒಕಖ ಕನ್ನಡ ಗಂಡು ಮಕ್ಕಳ ಶಾಲೆ. ಏಉಖ ಕನ್ನಡ ಹೆಣ್ಣು ಮಕ್ಕಳ ಶಾಲೆ. ಗಃಖ ಉರ್ದು ಶಾಲೆಯ ಅವರಣದಲ್ಲಿ ಯಾವುದೇ ಆಚರಣೆಗಳು ಬರಲಿ ಜಯಂತಿಗಳು ಬರಲಿ ಮೂರು ಶಾಲೆಯ ಎಲ್ಲಾ ಮುದ್ದು ಮಕ್ಕಳು ಒಂದಾಗಿ ಪ್ರತಿಯೊಂದು ಆಚರಣೆಗ ಜಯಂತಿಗಳನ್ನು ಒಂದೇ ಭಾವನೆಯಿಂದ ಅದ್ದೂರಿಯಾಗಿ ವಿಶ್ವ ದಿನಾಚರಣೆ ಆಚರಿಸಿದ ಮೂರು ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರು ಮೂರು ಶಾಲೆಯ ಮುಖ್ಯ ಗುರುಗಳು ಶಿಕ್ಷಕರು ಗುರು ಮಾತೆಯವರು ಮುದ್ದು ಮಕ್ಕಳಿಂದ ವಿಶ್ವ ದಿನಾಚರಣೆ ಎಲ್ಲರೂ ಸೇರಿ ಒಂದಾಗಿ ಆಚರಣೆ ಮಾಡಿದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ ಮನಗೂಳಿ ತಾಳಿಕೋಟೆ.**

## ಅಮೃತ ಸರೋವರ ದಡದಲ್ಲಿ ವಿಶ್ವ ಪರಿಸರ ದಿನಾಚರಣೆ



**ಸೂಳೇಭಾವಿ :** ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಸೂಳೇಭಾವಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅಮೃತ ಸರೋವರ ದಡದಲ್ಲಿ 30 ಕ್ಕೂ ಸಸಿ ನೆಡುವುದರ ಮೂಲಕವಿಶ್ವಪರಿಸರದಿನಾಚರಣೆಯನ್ನುಆಚರಿಸಲಾಯಿತು. ಅಮೃತ ಸರೋವರ ದಡದಲ್ಲಿ ವಿವಿಧ ಜಾತಿಯ 30 ಕ್ಕೂ ಹೆಚ್ಚು ಸಸಿಗಳನ್ನು ನೆಡಲಾಯಿತು. ಗ್ರಾಮ ಪಂಚಾಯತಿ ಅಧ್ಯಕ್ಷರು – ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು, ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗ ಸಸಿ ನೆಟ್ಟು ನೀರುಣಿಸಿದರು.

ಈ ಸಂದರ್ಭದಲ್ಲಿ ತಾಂತ್ರಿಕ ಸಂಯೋಜಕ ನವೀನ ಹಂಚಾಟೆ , ಐಇಸಿ ಸಂಯೋಜಕ ಬಸವರಾಜ ಕೊಪ್ಪದ , ಗ್ರಾಮ ಪಂಚಾಯಿತಿ ಅಧ್ಯಕ್ಷ ಪಿಡಪ್ಪ ಕುರಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಶಂಕರಾನಂದ ಹುಣಶ್ಯಾಳ , ಶಾಲಾ ಶಿಕ್ಷಕರು, ತಾಂತ್ರಿಕ ಸಹಾಯಕ ಲಾಲಸಾಬ್ ಗುರಗುಣ್ಣಿ , ಡಾಟಾ ಎಂಟ್ರಿ ಆಪರೇಟರ್ ಸಚಿನ್ ಕೊಳ್ಳಿ , ಅಕೌಂಟೆಂಟ್ ಎಚ್ ಎನ್ ಮಾಗಿ, ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

## ಸರಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಅಮರಗೌಡ ಶಿ.ಹರಿಜನ. ಮೊರಾರ್ಜಿ ವಸತಿ ಶಾಲೆಗೆ ಪ್ರಥಮ ಸುತ್ತಿನಲ್ಲಿ ಆಯ್ಕೆ.

**ನಾದ ಬಿಕೆ :** ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ನಾದ ಬಿಕೆ ಹಿರಿಯ ಪ್ರಾಥಮಿಕಶಾಲೆಯವಿದ್ಯಾರ್ಥಿಯಾದ ಕುಮಾರಅಮರಗೌಡಶಿವಪ್ಪಹರಿಜನ ಇತನು ಸನ್ 2024,–2025 ನೇ. ಸಾಲಿನ ಲಚ್ಯಾಣ ಮೊರಾರ್ಜಿ ವಸತಿ ಶಾಲೆಗೆ 6 ನೇ. ವರ್ಗದ ಮುಂಬಡ್ತಿಗೆ ಸಿಇಟಿ ಪರೀಕ್ಷೆಯಲ್ಲಿ ಅರ್ಹನಾಗಿ ಆಯ್ಕೆಯಾಗಿದ್ದು ,ನಾದ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಗುರುಗಳು.





ಸಿಬ್ಬಂದಿ ವರ್ಗ ಹಾಗೂ ಶಾಲಾ ಎಸ್ ಡಿ ಎಮ್ ಸಿ ಸಿಬ್ಬಂದಿಗಳು, ಗ್ರಾಮಸ್ಥರು ಉತ್ತಮ ಪ್ರಶಂಸೆ ವ್ಯಕ್ತಪಡಿಸಿದರು.

**– ಶಿವಪ್ಪ.ಬಿ.ಹರಿಜನ.ಇಂಡಿ. ವಿಜಯಪುರ.**



ಗದ್ದಿಗೌಡರ ಗೆಲುವು ಮಾಜಿ ಶಾಸಕ ದೊಡ್ಡನಗೌಡ ಪಾಟೀಲ್ ನೇತೃತ್ವದಲ್ಲಿ ನಗರದಲ್ಲಿ ವಿಜಯೋತ್ಸವ ಆಚರಣೆ

## ಸಂಗಣ್ಣ ಕರಡಿಗೆ ಕೂಡಲೆ ಎಂಎಲ್ಸಿ ಸ್ಥಾನ ನೀಡಲು ಆಗ್ರಹ

**ಕೊಪ್ಪಳ :** ಕೊಪ್ಪಳದಲ್ಲಿ ಸತತ ಮೂರು ಬಾರಿ ಗೆಲುವು ಸಾಧಿಸಿದ ಬಿಜೆಪಿ ಈ ಬಾರಿ ಕೊಪ್ಪಳದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ ಕಾಂಗ್ರೆಸ್ ಅಭ್ಯರ್ಥಿ ಕೆ ರಾಜಶೇಖರ್ ಹಿಟಾಳ್ ರವರ ಗೆಲುವಿಗೆ ಸಂಗಣ್ಣ ಕರಡಿ ಅವರ ಶ್ರಮ ಬಹಳ ಇದೆ ಕೂಡಲೇ ಕಾಂಗ್ರೆಸ್ ಹೈಕಮಾಂಡ್ ಅವರನ್ನು ಎಂಎಲ್ಸಿ ಸ್ಥಾನ ನೀಡಬೇಕೆಂದು ಈ ಭಾಗದ ನಿಷ್ಠಾವಂತ ಕಾರ್ಯಕರ್ತರು ಆಗ್ರಪಡಿಸಿದ್ದಾರೆ



ಈಗಾಗಲೇ ಕಾಂಗ್ರೆಸ್ ಹೈಕಮಾಂಡ್ ಎಂಟು ಜನ ಎಂಎಲ್ಸಿ ಅಭ್ಯರ್ಥಿಗಳ ಪಟ್ಟಿ ಘೋಷಿಸಿದ್ದು ಅದರಲ್ಲಿ ಪಕ್ಕದ ರಾಯಚೂರು ಜಿಲ್ಲೆಗೆ ಮೂರು ಸ್ಥಾನ ನೀಡಲಾಗಿದೆ ಅದರಲ್ಲಿ ಒಂದು ಸ್ಥಾನ ಬದಲಿಸಿ ಆಸ್ಥಾನ ಸಂಗಣ್ಣ ಕರಡಿಯವರಿಗೆ ನೀಡುವದು ಸೂಕ್ತ ಎಂಬ ಅಭಿಪ್ರಾಯ ಈ ಭಾಗದ ಕಾರ್ಯಕರ್ತರು ವ್ಯಕ್ತಪಡಿಸಿದ್ದಾರೆ

ಬಿಜೆಪಿ ಟಿಕೆಟ್ ವಂಚಿತ ಸಂಗಣ್ಣ ಕರಡಿಯವರು ತಕ್ಷಣ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಪಕ್ಷ ಸೇರ್ಪಡೆಗೊಂಡು ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿ ಕೆ ರಾಜಶೇಖರ್ ಹಿಟ್ನಾಳ ರವರ ಗೆಲುವಿಗೆ ಶ್ರಮಿಸಿದ್ದಾರೆ. ಅವರಿಗೆ ಕೂಡಲೇ ಕಾಂಗ್ರೆಸ್ ಹೈಕಮಾಂಡ್ ಎಂಎಲ್ಸಿ ಸ್ಥಾನ ನೀಡಬೇಕೆಂದು ಈ ಭಾಗದ ಕಾರ್ಯಕರ್ತರು ಆಗ್ರಪಡಿಸಿದ್ದಾರೆ.

## ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಸ್.ಜಿ. ನಂಜಯ್ಯಮಠ ರಾಜಿನಾಮೆಗೆ ಆಗ್ರಹ

**ಬಾಗಲಕೋಟೆ :** 2024 ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶ್ರೀಮತಿ ಸಂಯುಕ್ತಾ ಪಾಟೀಲ್ ಪರಾಭವಗೊಂಡ ಕಾರಣ ಇದರ ಹೊಣೆಯನ್ನು ಹೊತ್ತು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಬೇಕು ಅಂತಾ ಸ್ಥಳೀಯ ನಗರ ಯೋಜನಾ ಪ್ರಾಧಿಕಾರದ ಮಾಜಿ ಸಭಾಪತಿ ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತ ಎ.ಎ.ದಂಡಿಯಾ ಆಗ್ರಹ ಪಡಿಸಿದ್ದಾರೆ.



ನಂಜಯ್ಯನಮಠ ಜಿಲ್ಲಾ ಅಧ್ಯಕ್ಷ ಸ್ಥಾನ ವಹಿಸಿಕೊಂಡಗಿನಿಂದಲೂ ಪಕ್ಷದ ಸಂಘಟನೆ ಚಿಂತನೆ ಮಾಡಲೇ ಇಲ್ಲ. ಪಕ್ಷದ ಕಾರ್ಯಾಲಯ ಕೇವಲ ಜಯಂತಿಗಳನ್ನು, ಪುಣ್ಯತಿಥಿ ಆಚರಿಸಲು ಸೀಮಿತಗೊಂಡಿದೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರಕಾರ ಇದೆ. ಜಿಲ್ಲೆಯಲ್ಲಿ ಸಾಕಷ್ಟು ಸಮಸ್ಯೆಗಳಿದ್ದರೂ ಅವುಗಳ ಬಗ್ಗೆ ಗಂಭೀರವಾಗಿ ಪರಿಗಣಿಸಿಲ್ಲ. ರಾಜ್ಯಸರಕಾರದಗಮನಕ್ಕೆತಂದುಅವುಗಳನ್ನುಪರಿಹರಿಸಲು ಪ್ರಯತ್ನಿಲ್ಲ. ಮುಳುಗಡೆ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿನ ಜನತೆಯ ಸಮಸ್ಯೆಗಳನ್ನೂ ಆಲಿಸಿಲ್ಲ. ಸದಾಕಾಂಗ್ರೆಸ್‌ಪಕ್ಷದಬೆನ್ನೆಲುಬುಆಗಿರುವತುಳಿತಕ್ಕೊಳಗಾದ ಸಣ್ಣ ಸಣ್ಣ ಸಮಾಜದವರ ಸಭೆಗಳನ್ನು ನಡೆಸಲಿಲ್ಲ. ಅವರಿಗೆ ಪಕ್ಷದಲ್ಲಿ ಸೂಕ್ತ ಸ್ಥಾನ ಮಾನ ನೀಡಲಿಲ್ಲ. ಇವೆಲ್ಲ ಕಾರಣ ಗಳು ಸೋಲಿಗೆ ಪ್ರಮುಖ ಕಾರಣವಾಗಿದೆ.

ಚುನಾವಣೆ ಸಂದರ್ಭದಲ್ಲಿ ಪಕ್ಷಕ್ಕೆ ಸೇರ್ಪಡೆಗಾಗಿ ಆಸಕ್ತಿ ತೋರದೆ ಇರುವುದು ಈಗ ಪಕ್ಷದ ಸಂಘಟನೆಗಾಗಿ ಅನುವು ಮಾಡಿ ಕೊಡಲು ನಂಜಯ್ಯಾನಮಠ ರಾಜಿನಾಮೆ ನೀಡಬೇಕೆಂದು ದಂಡಿಯಾ ಒತ್ತಾಯಿಸಿದ್ದಾರೆ.

## ಬಳ್ಳಾರಿ ಲೋಕಸಭೆ ಚುನಾವಣೆ–2024: ಕಾಂಗ್ರೆಸ್ ಅಭ್ಯರ್ಥಿ ಈ. ತುಕಾರಾಮ್ ಗೆಲುವು

**ಹೊಸಪೇಟೆ (ವಿಜಯನಗರ ಜಿಲ್ಲೆ) :** ವಿಜಯನಗರಹಾಗೂಬಳ್ಳಾರಿಜಿಲ್ಲೆಗಳವಿವಿಧ ವಿಧಾನಸಭಾ ಕ್ಷೇತ್ರಗಳನ್ನೊಳಗೊಂಡಿರುವ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರವಾದ ಬಳ್ಳಾರಿ–09 ಲೋಕಸಭೆ ಸಾರ್ವತ್ರಿಕ ಚುನಾವಣೆ–2024ರ ಮತ ಎಣಿಕೆಯು ಜೂನ್ 4ರಂದು ನಡೆದಿದ್ದು, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ ತುಕಾರಾಮ್ ಅವರು 7,30,845 ಮತಗಳನ್ನು ಪಡೆದು 98,992 ಮತಗಳ ಅಂತರದ ಗೆಲುವು ಸಾಧಿಸಿದ್ದಾರೆ.

ಮತ ಎಣಿಕೆ ಪ್ರಾರಂಭವಾದ ಮೊದಲ ಸುತ್ತಿನಿಂದಲೇ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ ತುಕಾರಾಂ ಅವರು ಸಮೀಪದ ಸ್ಪರ್ಧಿ ಬಿಜೆಪಿ ಪಕ್ಷದ ಬಿ. ಶ್ರೀರಾಮುಲು ಅವರಿಗಿಂತಲೂ ಮತ ಗಳಿಕೆಯಲ್ಲಿ ಮುನ್ನಡೆ ಕಾಯ್ದು–ಕೊಂಡಿದ್ದರು.

ಕಾಂಗ್ರೇಸನ ತುಕಾರಾಮ್ ಅವರ ಸಮೀಪದ ಪ್ರತಿಸ್ಪರ್ಧಿಯಾದ ಭಾರತೀಯ ಜನತಾ ಪಾರ್ಟಿ ಅಭ್ಯರ್ಥಿ ಬಿ.ಶ್ರೀರಾಮುಲು ಅವರು 6,31,853 ಮತಗಳನ್ನು ಗಳಿಸುವಲ್ಲಿ ಯಶಸ್ವಿಯಾದರು.

ಬಹುಜನ ಸಮಾಜ ಪಾರ್ಟಿಯ ಅಭ್ಯರ್ಥಿ ವಾಲ್ಮೀಕಿ ಕೃಷ್ಣಪ್ಪ ಅವರು 5,911, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಭ್ಯರ್ಥಿ ಸಿ.ಚನ್ನವೀರ ಅವರು 3,797, ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಷ್ಟ್) ಪಕ್ಷದ ಅಭ್ಯರ್ಥಿ ಎ.ದೇವದಾಸ್ 1,741, ಪ್ರಹರ್ ಜನಶಕ್ತಿ ಪಾರ್ಟಿಯ ಅಭ್ಯರ್ಥಿ ಮಂಜುನಾಥ ಗೋಸಲ ಅವರು 1,322, ನವಭಾರತ ಸೇನಾ ಪಕ್ಷದ ಅಭ್ಯರ್ಥಿ ಜಿ.ಸ್ವಾಮಿ ಅವರು 944, ಪಕ್ಷೇತರ ಅಭ್ಯರ್ಥಿಗಳಾದ ಅರುಣ್ ಎಸ್. ಹಿರೇಹಾಳ್ ಅವರು 1,282, ಕಂಡಕ್ಟರ್ ಪಂಪಾಪತಿ ಅವರು 2,460 ಮತ್ತು ವೀರೇಶ ಅವರು 1,870 ಮತಗಳನ್ನು ಪಡೆದರು. ನೋಟಾಗೆ 7,889 ಮತಗಳು ಚಲಾವಣೆಯಾಗಿವೆ.



ಅಂಚೆ ಮತದಾನಕ್ಕೆ ಸಂಬಂಧಿಸಿದಂತೆ ಒಟ್ಟು 3436 ಮತಗಳು ಚಲಾಯಿಸಲಾಗಿದ್ದು, ಈ ಪೈಕಿ 81 ಮತಗಳು ತಿರಸ್ಕೃತ ಗೊಂಡಿವೆ. ಕಾಂಗ್ರೆಸ್ನ ಈ. ತುಕಾರಾಮ್ ಗೆ 1264 ಅಂಚೆ ಮತಗಳು ಬಂದಿವೆ. ಉಳಿದಂತೆ ವಾಲ್ಮೀಕಿ ಕೃಷ್ಣಪ್ಪ–10, ಬಿ. ಶ್ರೀರಾಮುಲು–2040, ಸಿ. ಚನ್ನವೀರ–03, ಎ. ದೇವದಾಸ್–02, ಮಂಜುನಾಥ ಗೋಸಾಲ–03, ಜಿ. ಸ್ವಾಮಿ–04, ಅರುಣ್ ಎಸ್ ಹಿರೇಹಾಳ್–01, ಕಂಡಕ್ಟರ್ ಪಂಪಾಪತಿ–02 ಹಾಗೂ ವೀರೇಶ್ ಗೆ 08 ಮತಗಳು ಬಂದಿವೆ. ಅಂಚೆ ಮತದಲ್ಲಿ 18 ಮತಗಳು ನೋಟಾ ಗೆ ಚಲಾವಣೆಗೊಂಡಿವೆ.

ಕ್ಷೇತ್ರವಾರು ಮತದಾನ ವಿವರ: 88–ಹಡಗಲಿ ಕ್ಷೇತ್ರದಲ್ಲಿ ಕಾಂಗ್ರೆಸಗೆ 76,486 ಮತ್ತು ಬಿಜೆಪಿಗೆ 68,229 ಮತಗಳು, 89–ಹಗರಿಬೊಮ್ಮನಹಳ್ಳಿಕ್ಷೇತ್ರದಲ್ಲಿಕಾಂಗ್ರೆಸ್ ಗೆ 97,103 ಬಿಜೆಪಿಗೆ 84,903 ಮತಗಳು, 90–ವಿಜಯನಗರ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆ 89,955 ಮತ್ತು ಬಿಜೆಪಿಗೆ 90,120 ಮತಗಳು ಹಾಗೂ 96–ಕೂಡ್ಲಿಗಿ ಕ್ಷೇತ್ರದಲ್ಲಿ ಕಾಂಗ್ರೆಸ್ –82,992 ಮತ್ತು ಬಿಜೆಪಿಗೆ 74,447 ಮತಗಳು ಲಭಿಸಿವೆ. ಬಳ್ಳಾರಿ ಜಿಲ್ಲಾ ವ್ಯಾಪ್ತಿಯ 91–ಕಂಪ್ಲಿ ಕ್ಷೇತ್ರದಲ್ಲಿ ಕಾಂಗ್ರೆಸಗೆ 91,047 ಮತ್ತು ಬಿಜೆಪಿಗೆ 81,468., 93–ಬಳ್ಳಾರಿ ಗ್ರಾಮೀಣ ಕ್ಷೇತ್ರದಲ್ಲಿ ಕಾಂಗ್ರೆಸಗೆ–1,01,434 ಮತ್ತು ಬಿಜೆಪಿಗೆ–75,556 ಮತಗಳು, 94–ಬಳ್ಳಾರಿ ನಗರ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆ 94,628 ಮತ್ತು ಬಿಜೆಪಿಗೆ 80,247 ಮತಗಳು, 95–ಸಂಡೂರು ಕ್ಷೇತ್ರದಲ್ಲಿ ಕಾಂಗ್ರೆಸಗೆ –95,936 ಮತ್ತು ಬಿಜೆಪಿಗೆ 74,843 ಮತಗಳು ಲಭಿಸಿವೆ.

**ಬಳ್ಳಾರಿಯಲ್ಲಿ ಮತ ಎಣಿಕೆ:** ಬಳ್ಳಾರಿ ನಗರದ ರಾವ್ಬಹದ್ದೂರ್ ವೈ ಮಹಾಬಲೇಶ್ವರ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮತ ಎಣಿ–ಕೆ ನಡೆಯಿತು. ಮತ ಎಣಿಕಾ ಕೇಂದ್ರಕ್ಕೆ ಸಿ.ಸಿ ಕ್ಯಾಮರಾ ಅಳವಡಿಸಿ ಮತ್ತು ಅಗತ್ಯ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಿ ಅಗತ್ಯ ಭದ್ರತೆ ನೀಡಲಾಗಿತ್ತು.

ಜೂನ್ 04ರ ಬೆಳಗ್ಗೆ 7.30ಕ್ಕೆ ಚುನಾವಣಾ ಸಾಮಾನ್ಯ ವೀಕ್ಷಕರಾದ ಚಂದ್ರಶೇಖರ ಸಖಮುರಿ, ಜಿಲ್ಲಾ ಚುನಾವಣಾಧಿಕಾರಿಗಳು ಸೇರಿದಂತೆ ಆಯಾ ಕ್ಷೇತ್ರ ಚುನಾವಣಾಧಿಕಾರಿಗಳು ಹಾಗೂ ಭದ್ರತಾ ಸಿಬ್ಬಂದಿಯ ಸಮ್ಮುಖದಲ್ಲಿ ಸ್ಟ್ರಾಂಗ್ ರೂಂನ್ನು ತೆರೆಯಲಾಯಿತು. ಮೊದಲಿಗೆ ಅಂಚೆ ಮತಪತ್ರಗಳ ಎಣಿಕೆ ಬಳಿಕ ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರಗಳ ವಿದ್ಯುನ್ಮಾನ ಮತಯಂತ್ರಗಳ ಮತ ಎಣಿಕೆ ನಡೆಯಿತು.

ಮತ ಎಣಿಕೆ ಕಾರ್ಯ ಒಟ್ಟು 08 ಹಾಲ್ಗಳಲ್ಲಿ ನಡೆಯಿತು. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ 14ಟೇಬಲ್‌ಕಾಯ್ದಿರಿಸಲಾಗಿತ್ತು.ಪ್ರತಿಟೇಬಲ್ಗೆ ಒಬ್ಬರು ಎಣಿಕಾ ಮೇಲ್ವಿಚಾರಕರು, ಒಬ್ಬರು ಎಣಿಕಾ ಸಹಾಯಕರು, ಒಬ್ಬರು ಮೈಕ್ರೋ ಅಬ್ಸರ್ವರ್ಸ್ಗಳನ್ನು ನಿಯೋಜಿಸಲಾಗಿತ್ತು. ಬಳ್ಳಾರಿ ಜಿಲ್ಲೆಗೆ ಒಟ್ಟು 112 ಟೇಬಲ್ಗಳಂತೆ, 150 ಎಣಿಕಾ ಮೇಲ್ವಿಚಾರಕರು, 159 ಎಣಿಕಾ ಸಹಾಯಕರು ಮತ್ತು 146 ಎಣಿಕಾ ಮೈಕ್ರೋ ಅಬ್ಸರ್ವರ್ಸ್ಗಳನ್ನು ನೇಮಿಸಿದ್ದು, ಆಯಾಕ್ಷೇತ್ರದ ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು, ಮತ ಎಣಿಕೆಸಿಬ್ಬಂದಿಮತ್ತುಅಭ್ಯರ್ಥಿಗಳುಹಾಗೂ ಚುನಾವಣಾ ಏಜೆಂಟರುಗಳು ಮತ ಎಣಿಕೆ ಕಾರ್ಯದಲ್ಲಿ ಭಾಗಿಯಾಗಿದ್ದರು.

ಮಾಧ್ಯಮ ಕೇಂದ್ರದ ಮೂಲಕ ಮತ ಎಣಿ–ಕೆಯ ಪ್ರತಿ ಸುತ್ತಿನ ಮಾಹಿತಿಯನ್ನು ಜನತೆಗೆ ತಲುಪಿಸಲು ವ್ಯವಸ್ಥೆ ಮಾಡಲಾಗಿತ್ತು. ವಿಜಯನಗರ ಜಿಲ್ಲೆಯ ವಿವಿಧ ಕ್ಷೇತ್ರಗಳು ಒಳಗೊಂಡಂತೆ ಬಳ್ಳಾರಿ ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆಯು ಮಧ್ಯಾಹ್ನದ ವೇಳೆಗೆ ಮುಕ್ತಾಯಗೊಂಡರೂ ಅಂತಿಮವಾಗಿ ಸಂಜೆಯ ವೇಳೆಗೆ ಫಲಿತಾಂಶವನ್ನು ಪ್ರಕಟಿಸಲಾಯಿತು.

## ಲೋಕಸಭಾ ಚುನಾವಣೆ ಕೊಪ್ಪಳ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹಿಟ್ನಾಳ್ ಗೆಲುವು

**ಕೊಪ್ಪಳ :** ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಕಳೆದ ಮೇ 07 ರಂದು ಜರುಗಿದ ಮತದಾನ ಜೂನ್ 04 ರಂದು ಜರುಗಿದ ಮತ ಎಣಿ–ಕೆ ಪ್ರಕ್ರಿಯೆದಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರ ದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ ಕೆ ರಾಜಶೇಖರ್ ಹಿಟ್ನಾಳ್ರವರು ನಿರೀಕ್ಷಿತ ಗೆಲುವು ಸಾಧಿಸಿ ವಿಜಯದ ಮಾಲೆ ತನ್ನ ಕೊರಳಿಗೆ ಹಾಕಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ



ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿದ್ದ ಡಾಕ್ಟರ್ ಬಸವರಾಜ್ ಕ್ಯಾಟರ್ ರವರನ್ನು ಸೋಲಿಸಿ ಸುಮಾರು 49 ಸಾವಿರ ಮತಗಳ ಅಂತರದಿಂದ ಜಯ ಸಾಧಿಸಿದ್ದಾರೆ ಈ ಕ್ಷೇತ್ರದಲ್ಲಿ ಸತತ ಮೂರು ಬಾರಿ ಬಿಜೆಪಿ ಗೆಲುವು ಸಾಧಿಸಿದ್ದು ಅದನ್ನು ಹಿಂದ–ಕ್ಕೆ ಸರಿಸಿ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಇಲ್ಲಿ ಗೆಲುವು ಸಾಧಿಸಿದ್ದು ವಿಶೇಷವಾಗಿದೆ

ಕೊಪ್ಪಳ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೊಪ್ಪಳ ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರ ವಾದ ಕೊಪ್ಪಳ ಗಂಗಾವತಿ ಯಲಬುರ್ಗಾ ಕುಷ್ಟಗಿ ಮತ್ತು ಕನಕಗಿರಿಸೇರಿದಂತೆ ರಾಯಚೂರು ಜಿಲ್ಲೆಯ ಸಿಂಧನೂರು ಮತ್ತು ಮಸ್ಕಿ ಅಲ್ಲದೆ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಈ ಎಂಟು ಕ್ಷೇತ್ರ ದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕುಷ್ಟಗಿ ಮತ್ತು ಸಿಂಧನೂರು ಹೊರತುಪಡಿಸಿ ಎಲ್ಲೆಡೆ ಹೆಚ್ಚು ಮತಗಳನ್ನು ಪಡೆದುಕೊಂಡಿದೆ

ಕೊಪ್ಪಳ ಕ್ಷೇತ್ರದ ಬಿಜೆಪಿ ಸಂಸದ ರಾಗಿದ್ದ ಸಂಗಣ್ಣ ಕರಡಿ ಅವರು ಈ ಬಾರಿ ಬಿಜೆಪಿ ಟಿಕೆಟ್ ತಪ್ಪಿರುವುದಕ್ಕೆ ಅವರು ಬಿಜೆಪಿ ಗೆ ಗುಡ್ ಬೈ ಹೇಳಿ ಕಾಂಗ್ರೆಸ್ ಪಕ್ಷ ಸೇರಿ ಪಕ್ಷದ ಅಭ್ಯರ್ಥಿ ರಾಜಶೇಖರ್ ಹಿಟ್ನಾಳರವರ ಗೆಲುವಿಗೆ ಅವರು ಕೂಡ ಪಣತೊಟ್ಟು ಶ್ರಮಿಸಿದ್ದಾರೆ ಗಂಗಾವತಿಯಲ್ಲಿ ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಅವರು ಸಹ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಭಾರಿ ಪ್ರಯತ್ನ ಮಾಡಿ ಅತಿ ಹೆಚ್ಚು ಬಹುಮತವನ್ನು ಗಂಗಾವತಿ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಗೆ ನೀಡಿದ್ದಾರೆ.

ಕೊಪ್ಪಳ ಲೋಕಸಭಾ ಕ್ಷೇತ್ರದಲ್ಲಿ ಸತತ ಮೂರು ಬಾರಿ ಸೋಲು ಕಂಡಿದ್ದ ಕಾಂಗ್ರೆಸ್ ಪಕ್ಷ ಈ ಬಾರಿ ಗೆಲುವು ಸಾಧಿಸಿದೆ ಕೆ ರಾಜಶೇಖರ್ ಹಿಟ್ನಾಳ ರವರು ಕೊಪ್ಪಳ ಕ್ಷೇತ್ರದಿಂದ ನೂತನ ಲೋಕಸಭಾ ಸದಸ್ಯರಾಗಿ ಆಯ್ಕೆಗೊಂಡಿದ್ದು ಇವರ ಅವಧಿಯಲ್ಲಿ ಈ ಭಾಗ ಇನ್ನಷ್ಟು ಅಭಿವೃದ್ಧಿಗೊಳ್ಳಲಿ ಎಂದು ಈ ಭಾಗದ ಪ್ರಜ್ಞಾವಂತ ನಾಗರಿಕರು ಆಶಯ ವ್ಯಕ್ತಪಡಿಸಿ ನೂತನ ಸಂಸದರಿಗೆ ಅಭಿನಂದಿಸಿದ್ದಾರೆ.

## ಕೊಪ್ಪಳ ತಾಲೂಕ ಪಂಚಾಯತ ಸಭಾಂಗಣದಲ್ಲಿ ತಾಲೂಕ ಮಟ್ಟದ ಟಾಸ್ಕ್ ಫೋರ್ಸ್ ಸಭೆ



**ಕೊಪ್ಪಳ :** ಬರಗಾಲ, ಕುಡಿಯುವ ನೀರು, ಮೇವು ಕುರಿತಾಗಿ ಮೇ 30 ರಂದು ಕೊಪ್ಪಳ ತಾಲೂಕ ಪಂಚಾಯತಿ ಸಭಾಂಗಣದಲ್ಲಿ ತಾಲ್ಲೂಕು ಮಟ್ಟದ ಟಾಸ್ಕ್‌ಪೋರ್ಸ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು.
ತಹಶೀಲ್ದಾರರಾದ ವಿಠಲ್ ಚೌಗಲಾ ಅವರು ಮಾತನಾಡಿ, ಗ್ರಾಮ ಪಂಚಾಯತಿ ವ್ಯಾಪ್ತಿಯ ಪ್ರತಿ ಗ್ರಾಮದಲ್ಲಿನ ಶಿಥಿಲಾವಸ್ಥೆಯಲ್ಲಿರುವ ಓಎಚ್‌ಟಿಗಳನ್ನು ಶೀಘ್ರದಲ್ಲೇ ಡೆಮಾಲಿಶ್ ಮಾಡಲು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯವರಿಗೆ ಸಭೆಯಲ್ಲಿ ಸೂಚಿಸಿದರು.
ಕೆಲವು ಕಡೆ ಅತೀ ಮಳೆಯಾಗುತ್ತಿರುವುದರಿಂದ ಚರಂಡಿ ನೀರು ಕುಡಿಯುವ ನೀರಿನೊಂದಿಗೆ ಸೇರದಂತೆ ಎಚ್ಚರಿಕೆ ವಹಿಸಬೇಕು. ಅದಕ್ಕಾಗಿ ಸೂಕ್ತ ಮುಂಜಾಗ್ರತೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದ ಅವರು, ಪ್ರತಿ ದಿನ ಕುಡಿಯುವ ನೀರು ಪರೀಕ್ಷೆಗೆ ಒಳಪಡಿಸಬೇಕು. ಗ್ರಾಮದಲ್ಲಿ ಕಲುಷಿತ ನೀರು ಸರಬರಾಜು ಆಗಿ ಯಾವುದೇ ರೀತಿಯ ವಾಂತಿ ಬೇಧಿ ಪ್ರಕರಣಗಳು ಕಂಡು ಬರದಂತೆ ಮುನ್ನೆಚರಿಕೆ ವಹಿಸುವಂತೆ ಸಭೆಯಲ್ಲಿ ಸೂಚಿಸಿದರು.
ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ ಮಾತನಾಡಿ, ಹುಲಿಗಿಯಲ್ಲಿ ಜಾತ್ರೆ ಇರುವುದರಿಂದ, ಬಂದ ಭಕ್ತಾಧಿಗಳಿಗೆ ಯಾವುದೇ ರೀತಿ ಕುಡಿಯುವ ನೀರಿನ ತೊಂದರೆ ಆಗದಂತೆ ಗ್ರಾಮ ಪಂಚಾಯತಿಯವರು ಕ್ರಮವಹಿಸತಕ್ಕದ್ದು. ಆರೋಗ್ಯ ಇಲಾಖೆಯವರು ಸಹ ಹುಲಿಗಿಯಲ್ಲಿ ಹಾಜರಿದ್ದು, ತಾತ್ಕಾಲಿಕ ಶೆಡ್ ಹಾಕಲು ಆರೋಗ್ಯ ಇಲಾಖೆಗೆ ಸೂಚಿಸಿದರು. ನೀರಿನ ಮೂಲ ಕಡಿಮೆ ಇರುವ ಗ್ರಾಮಗಳಲ್ಲಿ ಅವಶ್ಯಕತೆ ಇದ್ದರೆ ಖಾಸಗಿ ಬೋರ್‌ವೆಲ್ ತೆಗೆದುಕೊಳ್ಳಬೇಕು. ಇಳುವರಿ ಕಡಿಮೆಯಾಗಿರುವ ಸರ್ಕಾರಿ ಬೋರ್ವೆಲ್ ಗಳಿಗೆ ರಿಫ್ಲೆಶಿಂಗ್/ರಿಬೋರಿಂಗ್ ಮಾಡುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯವರಿಗೆ ಸೂಚಿಸಿದರು.
ಸಭೆಯಲ್ಲಿ ನಗರಸಭೆಯ ಆಯುಕ್ತರಾದ ಗಣಪತಿ, ಉಪತಹಶೀಲ್ದಾರರು, ಕಂದಾಯ ನಿರೀಕ್ಷಕರು, ಎಲ್ಲಾ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಆಡಳಿತಾಧಿಕಾರಿಗಳು ಹಾಜರಿದ್ದರು.

## ಬೆಳ್ಳಂ ಬೆಳಗ್ಗೆ ದಾಳಿ: ಬೆಳಗಾವಿ ಪಾಲಿಕೆ ಅಧಿಕಾರಿಗಳ ಚಳಿ ಬಿಡಿಸಿದ ಲೋಕಾಯುಕ್ತ ಅಧಿಕಾರಿಗಳು

**ಬೆಳಗಾವಿ :** ಸಾರ್ವಜನಿಕರ ಕೆಲಸಗಳು ವಿಳಂಬ ಆಗುತ್ತಿರುವ ಬಗ್ಗೆ ಸಾಕಷ್ಟು ದೂರು ಕೇಳಿ ಬಂದ ಹಿನ್ನೆಲೆ ಮಂಗಳವಾರ ಬೆಳ್ಳಂ ಬೆಳಗ್ಗೆ ಬೆಳಗಾವಿ ಮಹಾನಗರ ಪಾಲಿಕೆ ಕಚೇರಿ ಬಾಗಿಲು ತೆರೆಯುತ್ತಿದ್ದಂತೆ, ಲೋಕಾಯುಕ್ತ ಅಧಿಕಾರಿಗಳು ದಿಢೀರ್ ದಾಳಿ ನಡೆಸಿ, ಅಧಿಕಾರಿಗಳ ಚಳಿ ಬಿಡಿಸಿದರು.
ಲೋಕಾಯುಕ್ತ ಎಸ್ಪಿ ಹಣಮಂತರಾಯ್ ನೇತೃತ್ವದಲ್ಲಿ ಅಧಿಕಾರಿಗಳು ದಾಳಿ ಮಾಡಿದ್ದು, ಹಣಮಂತ ರಾಯ್ ಅವರಿಗೆ 10ಕ್ಕೂ ಅಧಿಕ ಲೋಕಾಯುಕ್ತ ಸಿಬ್ಬಂದಿ ಸಾಥ್ ನೀಡಿದರು. ಮಹಾನಗರ ಪಾಲಿಕೆಗೆ ವಿವಿಧ ಕೆಲಸಗಳಿಗೆ ಬರುವ ಸಾರ್ವಜನಿಕರು ಒಂದೂವರೆ ಗಂಟೆ ಕಾಯ್ದರೂ ಸಂಬಂಧಿಸಿದ ಅಧಿಕಾರಿಗಳು ಕಚೇರಿಗೆ ಬಾರದಿರುವುದು ದಾಳಿ ವೇಳೆ ಲೋಕಾಯುಕ್ತ ಅಧಿಕಾರಿಗಳ ಗಮನಕ್ಕೆ ಬಂತು. ಒಬ್ಬೊಬ್ಬರೆ ಕಚೇರಿಗೆ ಬಂದ ಪಾಲಿಕೆ ಅಧಿಕಾರಿಗಳಿಗೆ ಲೋಕಾಯುಕ್ತ ಅಧಿಕಾರಿಗಳು ತರಾಟೆಗೆ ತೆಗೆದು–ಕೊಂಡರು.
ಜನನ ಮತ್ತು ಮರಣ ಪತ್ರದ ಕಚೇರಿಯಲ್ಲಿ ಸಾರ್ವಜನಿಕರಿಂದ ಹೆಚ್ಚಿನ ಹಣ ವಸೂಲಿ ಮಾಡುವುದನ್ನು



ಗಮನಿಸಿದ ಲೋಕಾಯುಕ್ತ ಅಧಿಕಾರಿಗಳು ವಿಚಾರಣೆ ನಡೆಸಿದರು. ಹೆಚ್ಚಿಗೆ ಹಣ ಏಕೆ ಸಂಗ್ರಹಿಸುತ್ತಿದ್ದೀರಿ..? ಕೊಟ್ಟ ಹಣಕ್ಕೆ ಏಕೆ ರಶೀದಿ ಕೊಡುತ್ತಿಲ್ಲ ಎಂದು ಪ್ರಶ್ನಿಸಿದರು. ಆಗ ಸಿಬ್ಬಂದಿ ಸಮರ್ಪಕ ಉತ್ತರ ನೀಡದೇ ತಡಬಡಾಯಿಸಿದರು. ಅಲ್ಲದೇ ಚಿಲ್ಲರೆ ಸಮಸ್ಯೆಯಾದರೆ ಕ್ಯೂಆರ್ ಕೋಡ್ ಅಳವಡಿಸುವಂತೆ ತಾಕೀತು ಮಾಡಿದರು. ಜನನ ಮತ್ತು ಮರಣ ಪ್ರಮಾಣ ಪತ್ರ ದರ ಪಟ್ಟಿಯನ್ನು ಸಾರ್ವಜನಿಕರಿಗೆ ಕಾಣಿಸುವಂತೆ ಪ್ರದರ್ಶಿಸುವಂತೆ ಸೂಚಿಸಿದರು. ಪರಿಸರ, ಆರೋಗ್ಯ, ಶಿಕ್ಷಣ, ಇಂಜಿನಿಯರಿಂಗ್ ವಿಭಾಗ ಸೇರಿದಂತೆ ತೆರಿಗೆ ಪಾವತಿ ಕೇಂದ್ರಕ್ಕೂ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಆಲಿಸಿದರು.
ಸಾರ್ವಜನಿಕ ಪ್ರತಾಪ ಶ್ರೇಯಕರ್ ಮಾತನಾಡಿ, ”ಕಳೆದ ತಿಂಗಳು ನಾನು ಜನನ ಪತ್ರದ ತಿದ್ದುಪಡಿಗೆ ಅರ್ಜಿ ಸಲ್ಲಿಸಿದಾಗ ಸಹಿ ಮಾಡಿ ನಕಲು ಪ್ರತಿ ಕೊಟ್ಟರು. ಆದರೆ, 15 ರೂ. ಪಡೆದು ರಶೀದಿ ಕೊಡಲಿಲ್ಲ. ಇಂದು ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿ ಇಲ್ಲಿನ ಸಮಸ್ಯೆ ತಿಳಿದುಕೊಂಡಿದ್ದಾರೆ. ಅಲ್ಲದೇ ಚಿಲ್ಲರೆ ಹಣಕ್ಕೆ ಕ್ಯೂಆರ್ ಕೋಡ್ ಅಳವಡಿಸುವಂತೆ ಸೂಚಿಸಿದ್ದಾರೆ. ಪ್ರತಿ ಪ್ರಮಾಣ ಪತ್ರ ಪಡೆಯಲು ಬಹಳಷ್ಟು ವಿಳಂಬವಾಗುತ್ತಿದೆ” ಎಂದು ದೂರಿದ್ದಾರೆ.
ನಗರ ಸೇವಕ ಹಣಮಂತ ಕೊಂಗಾಲಿ ಮಾತನಾಡಿ, ”ತೆರಿಗೆ ವಂಚನೆ, ಲ್ಯಾಂಡ್ ಮಾಫಿಯಾ ಸೇರಿ ನಾಲ್ಕೈದು ಪ್ರಕರಣಗಳ ಕುರಿತು ತನಿಖೆ ನಡೆಸುವಂತೆ ಲೋಕಾಯುಕ್ತಕ್ಕೆ ಶಿಫಾರಸು ಮಾಡಿದ್ದೆವು. ಪಾಲಿಕೆಯಲ್ಲಿ ಬಿಜೆಪಿ ಆಡಳಿತದಲ್ಲಿದ್ದರೂ ಕಾಂಗ್ರೆಸ್ ಸರ್ಕಾರದ ಕೈಗೊಂಬೆಯಾಗಿ ಇಲ್ಲಿನ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಸರ್ಕಾರ ಸೂಕ್ತ ತನಿಖೆ ನಡೆಸದಿದ್ದರೆ ನಾವು ಕೋರ್ಟ್?ಗೆ ಹೋಗುತ್ತೇವೆ. ಭ್ರಷ್ಟ ಅಧಿಕಾರಿಗಳ ವಿರುದ್ಧ ಕಾನೂನು ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದ ಅವರು, ಇಂದು ಲೋಕಾಯುಕ್ತ ದಾಳಿ ಆಗಿದ್ದು, ಏನೇನು ವಿಚಾರಣೆ ಆಗಿದೆ ಎಂದು ತಿಳಿದು ಮುಂದಿನ ಹೆಜ್ಜೆ ಇಡುತ್ತೇವೆ” ಎಂದು ತಿಳಿಸಿದರು.

## ಉಚಿತ ಕಂಪ್ಯೂಟರ್ ಡಿಟಿಪಿ/ಗ್ರಾಫಿಕ್ ಡಿಸೈನಿಂಗ್ ತರಬೇತಿಗೆ ಅರ್ಜಿ ಆಹ್ವಾನ

**ಬೆಳಗಾವಿ :** ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಕೆನರಾ ಬ್ಯಾಂಕ್ ದೇಶಪಾಂಡೆ ಆರ್ ಸೆಟಿ, ತರಬೇತಿ ಸಂಸ್ಥೆಯಲ್ಲಿ 18 ರಿಂದ 45 ವಯಸ್ಸಿನ ಗ್ರಾಮೀಣ ಭಾಗದ ನಿರುದ್ಯೋಗ ಯುವಕ, ಯುವತಿಯರಿಗೆ ಜೂ. 13 ರಿಂದ 30 ದಿನಗಳ ಘರೇಲು ವಿದ್ಯುತ್ ಉಪಕರಣ ಸೇವಾ ಉದ್ಯಮಿ (ಹೌಸ್ ವೈರಿಂಗ್) ತರಬೇತಿ ಮತ್ತು ಜೂ. 20 ರಿಂದ 13 ದಿನಗಳ ಕೃಷಿ ಉದ್ಯಮಿ ತರಬೇತಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.
ಮೊದಲು ಬಂದವರಿಗೆ ಹಾಗೂ ಗ್ರಾಮೀಣ ಭಾಗದವರಿಗೆ ಮೊದಲ ಆದ್ಯತೆ ನೀಡಲಾಗಿದೆ. ತರಬೇತಿಯಲ್ಲಿ ಕೌಶಲ್ಯ, ಸಾಫ್ಟ್ ಸ್ಕಿಲ್ಸ್, ಯೋಗ ತರಬೇತಿ ಹಾಗೂ ಬ್ಯಾಂಕಿನಿಂದ ಸಾಲ ಪಡೆದು ಸ್ವಉದ್ಯೋಗ ಪ್ರಾರಂಭಿಸಲು ಬೇಕಾಗುವ ಜ್ಞಾನ, ಸರಕಾರಿ ಯೋಜನೆಗಳು ಮತ್ತು ಯೋಜನಾ ವರದಿ ತಯಾರಿಕೆ ಇನ್ನೇತರ ಮಾಹಿತಿಗಳನ್ನು ಉಚಿತವಾಗಿ ನೀಡಲಾಗುತ್ತದೆ.
ಆಸಕ್ತ ಅಭ್ಯರ್ಥಿಗಳು ಜೂ. 10ರ ಒಳಗಾಗಿ ತಮ್ಮ ಹೆಸರು, ವಿಳಾಸಗಳನ್ನು ನೊಂದಾಯಿಸಿ ಕೊಳ್ಳಬೇಕು.
ಸಂಸ್ಥೆಯ ದೂ. 9980510717, 9483485489 ಸಂಖ್ಯೆಗಳಿಗೆ ಸಂಪರ್ಕಿಸಬಹುದು ಎಂದು ಕೆನರಾ ಬ್ಯಾಂಕ್ ದೇಶಪಾಂಡೆ ನಿರ್ದೇಶಕರಾದ ಪ್ರಶಾಂತ ಬಡ್ಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಸತಿ ನಿಲಯದಲ್ಲಿ ಓದಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ದಲಿತ ವಿದ್ಯಾರ್ಥಿ ಪರಿಷತ್‌ನಿಂದ ವಿದ್ಯಾರ್ಥಿಗಳಿಗೆ ಸನ್ಮಾನ

**ವಿಜಯಪುರ :** ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಅಡಿಯ ವಸತಿ ನಿಲಯದಲ್ಲಿ ಅಧ್ಯಯನ ಮಾಡಿ 10 ಮತ್ತು 12 ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸಚೀನ ಲಮಾಣಿ, ಸಾನಿಕಾ ಲಮಾಣಿ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.
ದಲಿತ ವಿದ್ಯಾರ್ಥಿ ಪರಿಷತ್‌ನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀನಾಥ ಪೂಜಾರಿ ಅವರ ಮಾರ್ಗದರ್ಶನದಂತೆ 2024–25ನೇ ಸಾಲಿನಲ್ಲಿ ವಸತಿ ನಿಲಯಗಳಲ್ಲಿ ಓದಿ ಅತಿ ಹೆಚ್ಚಿನ ಅಂಕ ಪಡೆದು ತೇರ್ಗಡೆಯಾಗಿರುವ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಪ್ರೋತ್ಸಾಹವಾಗಿ 5000 ನೀಡುತ್ತಿದ್ದೇವೆ ಎಂದು ದಲಿತ ವಿದ್ಯಾರ್ಥಿ ಪರಿಷತ್‌ನ ಜಿಲ್ಲಾ ಸಹ ಸಂಚಾಲಕರಾದ ಮಹಾದೇವ ಚಲವಾದಿ ಅವರು ಸನ್ಮಾನಿಸಿ ಮಾತನಾಡಿದರು.



ಜಿಲ್ಲೆಯಲ್ಲಿ ಸಾಕಷ್ಟು ಬಡ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದು, ಅಂತಹ ಮಕ್ಕಳಿಗೆ ಸರಕಾರದ ಸಮಾಜ ಕಲ್ಯಾಣ ಇಲಾಖೆಯಡಿ ವಸತಿ ನಿಲಯಗಳನ್ನು ಮಾಡಿಕೊಟ್ಟು ಸಾಕಷ್ಟು ಪ್ರೋತ್ಸಾಹ ಹಾಗೂ ಮಾರ್ಗದರ್ಶನ ಮಾಡುತ್ತಿದ್ದು, ಇಲ್ಲಿ ಕಲಿತಂತಹ ವಿದ್ಯಾರ್ಥಿಗಳು ದೊಡ್ಡ ದೊಡ್ಡ ಹುದ್ದೆಯನ್ನು ಅಲಂಕರಿಸಿರುವುದು ಶ್ಲಾಘನೀಯ ವಿಷಯ ಆ ನೀಟ್ಟಿನಲ್ಲಿ ಇಂದು ಅತೀ ಹೆಚ್ಚು ಅಂಕ ಪಡೆದ ವಿದ್ಯಾಥಿಗಳಿಗೆ ಸನ್ಮಶನಿಸುತ್ತಿದ್ದೇವೆ ಎಂದರು.
ಈ ವೇಳೆ ಬಸವನ ಬಾಗೇವಾಡಿ ತಾಲೂಕಾ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಭವಾನಿ ಪಾಟೀಲ ಅವರು ಮಾತನಾಡುತ್ತಾ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಗೌರವಿಸಿ ಶುಭ ಹಾರೈಸಿ, ಮುಂದಿನ ಮಕ್ಕಳಿಗೆ ನೀವೇ ಮಾದರಿಯಾಗಿದ್ದಿರಿ, ಹೀಗೆ ಉನ್ನತವಾದ ಅಧ್ಯಯನ ಮಾಡಿ ಜೀವನದಲ್ಲಿ ಯಶಸ್ಸು ಕಂಡು ಸಮಾಜದ ಇತರರಿಗೂ ಸಹಾಯಮಾಡುವಂತಾಗಿ ಎಂದು ಶುಬ ಹಾರೈಸಿದರು.
ಈ ವೇಳೆ ಕಚೇರಿ ಅಧಿಕ್ಷಕರಾದ ದಪೇದಾರ ಅವರು ಮಾತನಾಡಿದರು, ದಲಿತ ವಿದ್ಯಾರ್ಥಿ ಪರಿಷತನ ತಾ ಸಂಚಾಲಕರಾದ ಅಲ್ಲಾಭಕ್ಷ ಫಿಂಜಾರ, ಸುರೇಶ ಕಣಕಲ, ಪ್ರಕಾಶ ಚಲವಾದಿ, ಭೀಮಶಿ ಚಲವಾದಿ, ವಸತಿ ನಿಲಯದ ವಿದ್ಯಾರ್ಥಿಗಳು, ನಿಲಯಪಾಲಕರು, ಹಾಗೂ ಸಿಬ್ಬಂದಿವರ್ಗದವರೂ ಇದ್ದರು.

## ಸಿವಿಲ್ ನ್ಯಾಯಾಧೀಶ(ಕಿ.ಶ್ರೇಣಿ)ಮತ್ತು ಸಹಾಯಕ ಸರಕಾರಿ ಅಭಿಯೋಜಕರಾಗಿ ಆಯ್ಕೆಯಾದ ಎಸ್.ಸಿ.ನಂದಿಮಠ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ

**ಬಾಗಲಕೋಟೆ :** ದೇಶಕ್ಕೆ ಅನೇಕ ಕಾನೂನ ಪಂಡಿತರನ್ನು ಕೊಟ್ಟ ಹೆಮ್ಮೆ ಬಿ.ವಿ.ವಿ.ಸಂಘದ ಎಸ್.ಸಿ. ನಂದಿಮಠ ಕಾನೂನುಮಹಾವಿದ್ಯಾಲಯಕ್ಕಿದೊಂದು ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಬಿ.ವ್ಹಿ.ವ್ಹಿ.ಸಂಘದ ಕಾನೂನು ಸಲಹೆಗಾರರಾದ ಶ್ರೀಮತಿ ವನಮಾಲಾ ಯಾದವ ಹೇಳಿದರು.
ಅವರು ಬಿ.ವ್ಹಿ.ವ್ಹಿ.ಸಂಘದ ಎಸ್.ಸಿ.ನಂದಿಮಠ ಕಾನೂನು ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಘಟಕದ ಸಹಯೋಗದೊಂದಿಗೆ ಗುರುವಾರ ಮಹಾವಿದ್ಯಾಲಯದ ಸಭಾಂಗಣದಲ್ಲಿ ನಡೆದ ಸಿವಿಲ್ ನ್ಯಾಯಾಧೀಶ (ಕಿ.ಶ್ರೇಣಿ) ಮತ್ತು ಸಹಾಯಕ ಸರಕಾರಿ ಅಭಿಯೋಜಕರಾಗಿ ಆಯ್ಕೆಯಾದ ಎಸ್.ಸಿ.ನಂದಿಮಠ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.
ಕಾನೂನಿನ ವಿದ್ಯಾರ್ಥಿಗಳಗೆ ಎಲ್ಲ ಕ್ಷೇತ್ರಗಳ ಬಗ್ಗೆ ಜ್ಞಾನ, ನೀತಿ ನಿಯಮಗಳ ಜೊತೆಗೆ ಕಾನೂನಿನಲ್ಲಿ ಮೂಲ ಉದ್ದೇಶಗಳ ತಳಹದಿಯ ಅರಿವೂ ಬಹಳ ಮುಖ್ಯವಾಗುತ್ತದೆ, ಶಿಸ್ತು, ಮನೋದರ್ಯ, ಸೇವಾಮನೋಭಾವ,



ಮಾನವಿಯ ಗುಣ, ಘಣತೆಯೊಂದಿಗೆ ಆಗು ಹೋಗುಗಳ ಬಗ್ಗೆ ಎಚ್ಚರಿಕೆಯನ್ನು ವಹಿಸಿ ಪರಿಹಾರಗಳನ್ನು ಕಂಡುಕೋಳ್ಳು ಚಾಕಚಕ್ಯತೆಯನ್ನು ಬೆಳೆಸಿಕೊಳ್ಳಬೇಕು, ಪ್ರತಿಯೊಬ್ಬರಿಗೂ ಜೀವಿಸುವ ಹಕ್ಕು ಇದೆ ಎಂಬುದನ್ನು ಗಮದಲ್ಲಿಟ್ಟುಕೊಂಡು, ವಿದ್ಯಾರ್ಥಿಗಳು ಸಂಶೋಧನಾತ್ಮಕ ಅಧ್ಯಯನದಲ್ಲಿ ತೊಡಗಬೇಕು. ಬಿ.ವ್ಹಿ.ವ್ಹಿ.ಸಂಘದ ಎಸ್.ಸಿ.ನಂದಿಮಠ ಕಾನೂನು ಮಹಾವಿದ್ಯಾಲಯದ ದೇಶಕ್ಕೆ ಅನೇಕ ಉತ್ತಮ ಕಾನೂನು ಪಂಡಿತರನ್ನು ಕೋಟ್ಟಿರುವುದುಹಮ್ಮೆಯವಿಷಯವಾಗಿದೆ ಎಂದರು.
ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ಮಾಜಿ ಶಾಸಕರು, ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ, ಉತ್ತರ ಕರ್ನಾಟಕದ ಈ ಭಾಗದಲ್ಲಿ ನ್ಯಾಯಾಂಗ ವ್ಯವಸ್ಥೆಗೆ ಬಿ.ವ್ಹಿ.ವ್ಹಿ.ಸಂಘದ ಎಸ್.ಸಿ.ನಂದಿಮಠ ಕಾನೂನುಮಹಾವಿದ್ಯಾಲಯತನ್ನದೇಆದ ಕೊಡುಗೆ ನೀಡುತ್ತ ಬಂದಿದ್ದು. 1986ರಲ್ಲಿ ಪ್ರಾರಂಭವಾದ ಮಹಾವಿದ್ಯಾಲಯ ಇಲ್ಲಿಯವರೆಗೆ ಸುಮಾರು 29 ಜನ ನ್ಯಾಯಾಧೀಶರುಗಳನ್ನು, 40ಕ್ಕಿಂತ ಹೆಚ್ಚು ಸರಕಾರಿ ಅಭಿಯೋಜಕರನ್ನು, ಅನೇಕ ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿಗಳ ಕಾನೂನು ಅಧಿಕಾರಿಗಳನ್ನು ಮತ್ತು ಸಾವಿರಾರು ಜನ ಉತ್ತಮ ನ್ಯಾಯವಾದಿಗಳನ್ನು ಕೊಡಮಾಡಿದೆ. ಇನ್ನೂ ಹೆಚ್ಚಿನ ನ್ಯಾಯಾಧೀಶರುಗಳನ್ನು ನ್ಯಾಯಾಂಗವ್ಯವಸ್ಥೆಗೆಕೊಡಮಾಡುವುದು ಮಹಾವಿದ್ಯಾಲಯದ ಆಶಯವಾಗಿದೆ, ಇಂದು ತನ್ನದೆಯಾದ ಸಾಧನೆಯ ಹೆಸರಿನೊಂದಿಗೆ ರಾಜ್ಯದಲ್ಲಿ ಗುರಿತಿಸಿಕೊಂಡಿರುವುದು ಹೆಮ್ಮೆ ವಿಷಯವಾಗಿದೆ ಎಂದ ಅವರು ಕಾನೂನು ವಿದ್ಯಾರ್ಥಿಗಳಿಗೆ ಸಾಕಷ್ಟು ಅವಕಾಶಗಳಿವೆ, ವಕೀಲಕಿಒಂದುವೃತ್ತಿಯಲ್ಲಾಇದುನ್ಯಾಯ ಒದಗಿಸುವ ವ್ಯವಸ್ಥೆಯಾಗಿದೆ, ಕಾನೂನು ವಿದ್ಯಾರ್ಥಿಗಳು ಒಳ್ಳೆಯ ನ್ಯಾಯಾಧೀಶರು ಹಾಗೂ ನ್ಯಾಯವಾಧಿಗಳಾಗಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದರು.
**ಸನ್ಮಾನ :** ಇದೆ ಸಂದರ್ಭದಲ್ಲಿ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಎಸ್.ಸಿ.ನಂದಿಮಠ ಕಾನೂನು ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳಾದ ಕುಮಾರಿ ಭಾಗ್ಯಶ್ರೀ ಮಾದರ ಹಾಗೂ ಸಹಾಯಕ ಸರಕಾರಿ ಅಭಿಯೋಜಕರಾಗಿ ಆಯ್ಕೆಯಾದ ಕುಮಾರಿ ಸಂಧ್ಯಾ ಸಿದ್ದಾಪೂರ, ವಾಯ್.ಜೆ.ಸಣಬಸಣ್ಣವರ, ಜಗತ್ ಕಣವಿ ಹಾಗೂ ನಾಗರಾಜ ಪೂಜಾರ ಇವರಿಗೆ ಮಹಾವಿದ್ಯಾಲಯದ ಪರವಾಗಿ ಸನ್ಮಾನಿಸಿ ಗೌರವಿಸಲಾಯಿತು.
ಸನ್ಮಾನ ಸ್ವೀಕರಿಸಿ ಮಾತನಾಡಿದ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಕುಮಾರಿ ಭ್ಯಾಗ್ಯಶ್ರೀ ಮಾದರ
ಹಕ್ಕುಗಳ ಜೋತೆಗೆ ಕರ್ತವ್ಯಗಳ ಬಗ್ಗೆ ಅರಿವು ಅಗತ್ಯವಿದ್ದು, ನೋಂದವರ ಬೆನ್ನಿಗೆ ನಿಲ್ಲೊವ ಕೆಲಸವಾಗಲಿ, ನಮಗೆ ವಿದ್ಯಾಧಾನ ಮಾಡಿದ ಮಹಾವಿದ್ಯಾಲಯ ಹಾಗೂ ಸಂಘದ ಬಗ್ಗೆ ಹೆಮ್ಮೆ ಇರಲಿ ಅದಕ್ಕೆಸದಾಕಾಲಚಿರರುಣಿಯಾಗಿರೋಣ ಎಂದರು.
ಕಾರ್ಯಕ್ರಮದಲ್ಲಿ ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಶ್ರೀ ಗುರುಬಸವಎಸ್.ಸೂಳಿಭಾವಿವೇದಿಕೆಯ ಮೇಲೆ ಉಪಸ್ಥಿತರಿದ್ದರು.
ಕಾಲೇಜಿನ ಪ್ರಾಚಾರ್ಯರಾದ ಡಾ.ಎಂ.ಪಿ.ಚಂದ್ರಿಕಾ ಅವರು ಕಾರ್ಯಕ್ರಮದಲ್ಲಿ ಸ್ವಾಗತಿಸಿ ಪರಿಚಯಿಸಿದರು. ಸಹಾಯಕ ಪ್ರಾಧ್ಯಾಪಕಿ ಭವಾನಿ ಪಾಟೀಲ ಕಾಲೇಜಿನ ಬಗ್ಗೆ ಸಂಕ್ಷಿಪ್ತ ಪರಿಚಯ ತಿಳಿಸಿದರು, ಕುಮಾರ ಸುನೀಲ ಗೋಡಿ ಪ್ರಾರ್ಥನೆ ಸಲ್ಲಿಸಿದರೆ, ಸಹ ಪ್ರಾಧ್ಯಾಪಕ ಶರಣಬಸವ ವಂದಿಸಿದರು.

## ದುಶ್ಚಟಗಳಿಗೆ ದಾಸರಾಗಬೇಡಿ: ಯೋಗಿನಿ ಅಕ್ಕ

**ಕೊಪ್ಪಳ :** ದುಶ್ಚಟಗಳಿಗೆ ದಾಸರಾಗಬೇಡಿ ದುಷ್ಟಗಳಿಂದ ದೂರ ಉಳಿಯಬೇಕು ಇದರಿಂದ
ಮನುಷ್ಯನಲ್ಲಿ ಮಾನಸಿಕ ಆತ್ಮಿಕ ಬಲ ಕಡಿಮೆ ಆಗಿರುವುದೇ ತಂಬಾಕಿಗೆ ಬಲಿಯಾಗಲು ಮುಖ್ಯ ಕಾರಣ ಎಂದು ಬ್ರಹ್ಮಕುಮಾರಿ ಯೋಗಿನಿ ಅಕ್ಕ ತಿಳಿಸಿದರು. ಅವರು ಈಶ್ವರೀಯ ವಿಶ್ವವಿದ್ಯಾಲಯ ಏರ್ಪಡಿಸಿದ ತಂಬಾಕು ನಿಷೇಧ ದಿನ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಬುದ್ಧಿಜೀವಿಯಾದ ಮನುಷ್ಯನಿಗೆ ಒಳ್ಳೆಯದನ್ನು ಸ್ವೀಕಾರ ಮಾಡಲು ಆಗುತ್ತಿಲ್ಲ ಕೆಟ್ಟದ್ದನ್ನು ಬಿಡಲು ಆಗುತ್ತಿಲ್ಲ ಅನೇಕ ದುಶ್ಚಟಗಳಿಗೆ ದಾಸನಾಗುತ್ತಿದ್ದಾನೆ ದಿನೇ ದಿನೇ ಮನುಷ್ಯನಲ್ಲಿ ದುಃಖ ಅಶಾಂತಿ ಹೆಚ್ಚುತ್ತಿದೆ ಇಂತಹ ಸ್ಥಿತಿಗೆ ಮೂಲ ಕಾರಣ ಮನುಷ್ಯನ ಮನೋಬಲ ಕಡಿಮೆಯಾಗಿದೆ ತನ್ನ ಮೇಲೆ ತನಗೆ ನಿಯಂತ್ರಣ ಶಕ್ತಿ ಕಳೆದುಕೊಳ್ಳುತ್ತಿದ್ದಾನೆ ಆದ್ದರಿಂದ ವರ್ತಮಾನ ಸಮಯದಲ್ಲಿ ಇಂದಿನ ಮನುಕುಲವನ್ನು ದುಶ್ಚಟಗಳಿಂದ ದೂರ ಮಾಡಲು ವ್ಯಕ್ತಿ ದುಶ್ಚಟಗಳಿಗೆ ವಶವಾಗದಂತೆ ಮಾಡಲು ವ್ಯಕ್ತಿಯಲ್ಲಿ ದೃಢತೆಯ ಶಕ್ತಿ ಆತ್ಮವಿಶ್ವಾಸವನ್ನು ಮೂಡಿಸುವ ಉದ್ದೇಶದಿಂದಲೇ ಈಶ್ವರೀಯ ವಿಶ್ವ ವಿದ್ಯಾಲಯ ಇಂದು ವಿಶ್ವ ತಂಬಾಕು ನಿಷೇಧ ದಿನದ ಅಂಗವಾಗಿ ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಿದೆ ಎಂದರು. ಆಧುನಿಕ ಸಮಾಜದ ಒಂದು ಜ್ವಲಂತ ಸಮಸ್ಯೆ ಎಂದರೆ ತಂಬಾಕು ಸೇವನೆ, ಇದರಿಂದ ಲಕ್ಷಾಂತರ ಜನರ ರಚನಾತ್ಮಕ ಮತ್ತು ಕ್ರಿಯಾತ್ಮಕ ಶಕ್ತಿ ಹಾಳಾಗುತ್ತಿದೆ. ನೈತಿಕವಾಗಿ ಆರ್ಥಿಕವಾಗಿ ಸಾಮಾಜಿಕವಾಗಿ ವ್ಯಕ್ತಿ ಹಾಳಾಗುತ್ತಾನೆ. ಒಮ್ಮೆ ಈ ತಂಬಾಕು ಸೇವನೆಯ ಚಟ ಬಂತೆ–ಂದರೆ ಅದು ವ್ಯಕ್ತಿಯನ್ನು ಬಿಡುವುದಿಲ್ಲ ಮನುಷ್ಯ ದುಷ್ಚಟಗಳಿಗೆ ಗುರಿಯಾಗಲು ಆತನ ದುರ್ಬಲ ವಿಚಾರಗಳೇ ಕಾರಣ. ವಿಚಾರ ಪರಿವರ್ತನೆಯಾಗದೆ ಆಚಾರ ಪರಿವರ್ತನೆ ಆಗಲು ಸಾಧ್ಯವಿಲ್ಲ. ಕೆಟ್ಟ ವಿಚಾರ ಕೆಟ್ಟ ಸಂಗ ಕೆಟ್ಟ ಚಟದಿಂದ ಮುಕ್ತ ಆಗಬೇಕಾದರೆ ಒಳ್ಳೆ ಸಂಗ ಒಳ್ಳೆ ವಿಚಾರ ಒಳ್ಳೆ ಸಂಸ್ಕಾರ ಜೀವನದಲ್ಲಿ ಬೇಕು. ಇಂದಿನ ಮನುಕುಲಕ್ಕೆ ಒಳ್ಳೆತನವನ್ನ ಜಾಗೃತಗೊಳಿಸಲು ಸಶಕ್ತ ಸಮಾಜವನ್ನು ನಿರ್ಮಾಣ ಮಾಡಲು ಮನೋಬಲ ವೃದ್ಧಿಗಾಗಿ ರಾಜಯೋಗ ಶಿಬಿರವನ್ನು ಈಶ್ವರೀಯ ವಿಶ್ವ ವಿದ್ಯಾಲಯ ಉಚಿತವಾಗಿ ಏರ್ಪಡಿಸಿದೆ ಬೆಳಿಗ್ಗೆ ಮತ್ತು ಸಂಜೆ 6.00 ಗಂಟೆಯಿಂದ 7.00ಗಂಟೆವರೆಗೆ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಜರುಗುವುದು ಎಂದು ಯೋಗಿನಿ ಅಕ್ಕ ಕರೆ ನೀಡಿದರು. ಸಾಮೂಹಿಕವಾಗಿ ಎಲ್ಲರೂ ಪ್ರತಿಜ್ಞಾವಿಧಿ ಸ್ವೀಕಾರ ಮಾಡಿದರು. ಬ್ರಹ್ಮಕುಮಾರಿ ಸ್ನೇಹಕ್ಕ ಕಾರ್ಯಕ್ರಮ ನಿರೂಪಿಸಿದರು.

### ಡಾ. ವೀರಣ್ಣ ಸಿ.ಚರಂತಿಮಠ ಅವರ ಜನ್ಮದಿನದ ಪ್ರಯುಕ್ತ ದಿವ್ಯಾಂಗರಿಗೆ ಕೃತಕ ಅಂಗಾಂಗಗಳ ವಿತರಣೆ

## ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಸ್ಥಾಪನೆ: ಚರಂತಿಮಠ

**ಬಾಗಲಕೋಟೆ :** ಜಿಲ್ಲಾ ಅಂಗವಿಕಲ ಪುನರ್ವಸತಿ ಕೇಂದ್ರವನ್ನು ಸ್ಥಾಪಿಸಬೇಕೆನ್ನುವ ಪ್ರಯತ್ನ ಅನೇಕ ವರ್ಷಗಳಿಂದ ನಡೆಯುತ್ತಿದೆ. ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಈ ಕೇಂದ್ರವನ್ನು ಸ್ಥಾಪಿಸಲು ಸರ್ಕಾರಕ್ಕೆ ಅನುಮೋದನೆ ಸಲ್ಲಿಸಲಾಗಿದ್ದು, ಸಧ್ಯದಲ್ಲೇ ಅನುಮತಿ ದೊರೆಯುವ ನಿರೀಕ್ಷೆ ಇದೆ ಎಂದು ಬಿ.ವಿ.ವಿ.ಸಂಘ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಹೇಳಿದರು.
ಅವರು ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಸಿ.ಚರಂತಿಮಠ ಅವರ ಜನ್ಮದಿನದ ಪ್ರಯುಕ್ತ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ದಿವ್ಯಾಂಗರಿಗೆ ಕೃತಕ ಅಂಗಾಂಗಗಳ ವಿತರಣಾ ಕಾರ್ಯಕ್ರಮದಲ್ಲಿ ಅಂಗಾಂಗಳನ್ನು ವಿತರಿಸಿ ಮಾತನಾಡಿದರು.
ಬಿ.ವಿ.ವಿ ಸಂಘದ ‘ಸಮನ್ವಯ ಶಾಲೆ’ಯ ನಾಲ್ಕು ಮಕ್ಕಳು ಸೇರಿದಂತೆ ಒಟ್ಟು ಹತ್ತು ದಿವ್ಯಾಂಗರಿಗೆ ಕೃತಕ ಅಂಗಾಂಗಗಳನ್ನು ವಿತರಿಸಲಾಗಿದೆ, ದಿವ್ಯಾಂಗ ಮಕ್ಕಳಿಗಾಗಿ ಬಿ.ವಿ.ವಿ ಸಂಘದ “ಸಮನ್ವಯ ಶಾಲೆ” ಆರಂಭಿಸಲಾಗಿದೆ. ಸುಮಾರು 54 ಮಕ್ಕಳು ಈ ಶಾಲೆಯಲ್ಲಿ ಓದುತ್ತಿರುವರು. ಮಕ್ಕಳಿಗೆ ಓದಿಗೆ ಅಗತ್ಯವಾದ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗಿದೆ ಹಾಗೂ ನ್ಯೂನ್ಯತೆಯಿಂದ ಹೊರಬರಲು ಅವರಿಗೆ ಫಿಜಿಯೋಥೆರಪಿ ಮತ್ತು ಇತರ ತರಬೇತಿಯನ್ನು ನೀಡಲಾಗುತ್ತಿದೆ. ವಿಶೇಷ ಚೇತನ ಮಕ್ಕಳಿಗಾಗಿ ಕುಮಾರೇಶ್ವರ ಆಸ್ಪತ್ರೆಯಲ್ಲಿ ನವಜಾತ ಶಿಶುಗಳಿಗೆ ಕಡ್ಡಾಯ ಶ್ರವಣ ಶಕ್ತಿಯ ತಪಾಸಣೆ, ಕಣ್ಣಿನ ಪೊರೆ ಚಿಕಿತ್ಸೆ, ಕುಷ್ಠರೋಗ ಪರೀಕ್ಷೆ ಇತ್ಯಾದಿ ತಪಾಸಣೆಗಳನ್ನು ಮಾಡಲಾಗುತ್ತಿದೆ. ಶ್ರವಣ ದೋಷ ನಿವಾರಣೆಗಾಗಿ 6 ವರ್ಷ ವಯಸ್ಸಿನೊಳಗಿನ ಮಕ್ಕಳಿಗೆ ಉಚಿತವಾಗಿ ಸರ್ಕಾರದ ಆರೋಗ್ಯ ಯೋಜನೆಯಡಿ ಕಾಕ್ಲಿಯರ್ ಇಂಪ್ಲಾಂಟ್ ಅಳವಡಿಕೆ ಮಾಡಲಾಗುತ್ತಿದೆ. ಕುಮಾರೇಶ್ವರ ಆಸ್ಪತ್ರೆಯಲ್ಲಿ 2017 ರಲ್ಲಿ ಥಲಸ್ಸೇಮಿಯಾ ಮತ್ತು ಹಿಮೋಫಿಲಿಯಾ



ಸೊಸೈಟಿಯನ್ನು ಸ್ಥಾಪಿಸಿ ಥಲಸ್ಸೇಮಿಯಾ ರೋಗದಿಂದ ಬಳಲುತ್ತಿರುವ ಮಕ್ಕಳಿಗೆ ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗುತ್ತಿದೆ. ಪ್ರಸ್ತುತ 50 ಮಕ್ಕಳು ಥಲಸ್ಸೇಮಿಯಾ ರೋಗಕ್ಕೆ ಚಿಕಿತ್ಸೆ ಪಡೆಯುತ್ತಿರುವರು. ಈ ಕಾರ್ಯಕ್ಕಾಗಿ ಬೀಳೂರು ಶ್ರೀ ಗುರುಬಸವ ಪತ್ತಿನ ಸಹಕಾರ ಸಂಘದಿಂದ ಪ್ರತಿವರ್ಷ 26 ಲಕ್ಷ 31 ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿ ನೀಡಲಾಗುತ್ತಿದೆ. ಕರ್ನಾಟಕ ಸರ್ಕಾರದಿಂದ ಮನ್ನಣೆ ಪಡೆದ ಕುಮಾರೇಶ್ವರ ಆಸ್ಪತ್ರೆಯ ಎ.ಆರ್.ಟಿ ಸೆಂಟರ್ ಮೂಲಕ ಎಚ್.ಐ.ವಿ ಪೀಡಿತ ಮಕ್ಕಳಿಗೆ ಔಷಧಿಯನ್ನು ಉಚಿತವಾಗಿ ವಿತರಿಸಲಾಗುತ್ತಿದೆ ಮತ್ತು ತಜ್ಞವೈದ್ಯರಿಂದ ಆಪ್ತಸಮಾಲೋಚನೆ (ಕೌನ್ಸಿಲಿಂಗ್) ಮಾಡಲಾಗುತ್ತಿದೆ. ದಿವ್ಯಾಂಗರಿಗೆ ಅನುಕೂಲವಾಗಲೆಂದು ಕುಮಾರೇಶ್ವರ ಆಸ್ಪತ್ರೆಯಲ್ಲಿ 2013 ರಲ್ಲಿ ಕೃತಕ ಅಂಗಾಂಗಗಳ ಉತ್ಪಾದನಾ ಘಟಕವನ್ನು ಸ್ಥಾಪಿಸಲಾಗಿದೆ. ಇದುವರೆಗೂ ಸುಮಾರು 2500 ಕ್ಕಿಂತ ಹೆಚ್ಚು ದಿವ್ಯಾಂಗರು ಈ ಘಟಕದ ಪ್ರಯೋಜನ ಪಡೆದುಕೊಂಡಿರುವರು. ಈ ಮೊದಲು ಕೃತಕ ಅಂಗಾಂಗಗಳಿಗಾಗಿ ಬೇರೆ ರಾಜ್ಯಗಳಿಗೆ ಹೋಗಬೇಕಾಗಿದ್ದ ಸಮಸ್ಯೆ ಈ ಭಾಗದಲ್ಲಿ ನಿವಾರಣೆಯಾಗಿದೆ. ಒಟ್ಟಾರೆ ದಿವ್ಯಾಂಗರಿಗೆ ಅಗತ್ಯವಾದ ಅತ್ಯುತ್ತಮ ವೈದ್ಯಕೀಯ ಸೌಲಭ್ಯ ಹಾಗೂ ಚಿಕಿತ್ಸೆಯನ್ನು ಬಿ.ವಿ.ವಿ ಸಂಘದಿಂದ ಒದಗಿಸಲಾಗುತ್ತಿದೆ. ಜಿಲ್ಲಾ ಅಂಗವಿಕಲ ಪುನರ್ವಸತಿ ಕೇಂದ್ರವನ್ನು ಸ್ಥಾಪಿಸಬೇಕೆನ್ನುವ ಪ್ರಯತ್ನ ಅನೇಕ ವರ್ಷಗಳಿಂದ ನಡೆಯುತ್ತಿದೆ. ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಈ ಕೇಂದ್ರವನ್ನು ಸ್ಥಾಪಿಸಲು ಸರ್ಕಾರಕ್ಕೆ ಅನುಮೋದನೆ ಸಲ್ಲಿಸಲಾಗಿದ್ದು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.
ಬಿ.ವಿ.ವಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಎಲ್ಲ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಡಾ.ವೀರಣ್ಣ ಚರಂತಿಮಠ ಅವರ ಸಾಧನೆಗಳು ನಿರಂತರವಾಗಿ ಮುಂದುವರೆಯಲೆಂದು ಹಾರೈಸಿ ದೇವರು ಅವರಿಗೆ ಆಯುರಾರೋಗ್ಯವನ್ನು ನೀಡಲೆಂದು ಜನ್ಮದಿನ ಪ್ರಯುಕ್ತ ಶುಭ ಕೋರಿದರು. ಕಾರ್ಯಕ್ರಮದಲ್ಲಿ ಬಿ.ವಿ.ವಿ ಸಂಘದ ಗೌರವ ಕಾರ್ಯದರ್ಶಿ ಶ್ರೀ ಮಹೇಶಅಥಣಿ,ವೈದ್ಯಕೀಯಆಡಳಿತಮಂಡಳಿ ಕಾರ್ಯಾಧ್ಯಕ್ಷ ಶ್ರೀ ಅಶೋಕ ಎಮ್.ಸಜ್ಜನ (ಬೇವೂರ), ಬಿ.ವಿ.ವಿ ಸಂಘದ ಸದಸ್ಯರಾದ ಡಾ.ಮಹಾಂತೇಶ ಕಡಪಟ್ಟಿ, ಡಾ.ಸುಭಾಷ ಪಾಟೀಲ, ಅಶೋಕ ಕರಡಿ, ಅಶೋಕಕುಮಾರ ಕಲ್ಯಾಣಶೆಟ್ಟಿ, ಕುಮಾರ ಜಿಗಜಿನ್ನಿ, ಮಹೇಶ ಅಂಗಡಿ, ಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಡಾ.ಅಶೋಕ ಮಲ್ಲಾಪೂರ, ವೈದ್ಯಕೀಯ ಅಧೀಕ್ಷಕಿ ಡಾ.ಭುವನೇಶ್ವರಿ ಯಳಮಲಿ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

### ಪೊಲೀಸ್ ಹಿರಿಯ ಅಧಿಕಾರಿಗಳ ಬೆಟ್ಟಿ * ಬೆರಳಚ್ಚು ತಜ್ಞ, ಶ್ವಾನದಳದೊಂದಿಗೆ ಪರಿಶೀಲನೆ

# 446.24 ಗ್ರಾಂ.ಬಂಗಾರ, 4.30 ಲಕ್ಷ ರೂ. ನಗದು ಕಳವು

**ತಾಳಿಕೋಟೆ :** ಪಟ್ಟಣದ ವಿದ್ಯಾನಗರ ಬಡಾವಣೆಯಲ್ಲಿರುವ ಅಮೃತಾ ಜ್ಯೂಲೇರ್ಸ್ ಅಂಗಡಿಯ ಕೀಲಿ ಮುರಿದು ಸುಮಾರು 446.24 ಗ್ರಾಂ ಬಂಗಾರ ಮತ್ತು 4 ಲಕ್ಷ 30 ಸಾವಿರ ನಗದು ಹಣ ದೋಚಿಕೊಂಡು ಪರಾರಿಯಾಗಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಪಟ್ಟಣದ ವಿದ್ಯಾನಗರ ಬಡಾವಣೆಯಲ್ಲಿರುವ ಶಿವಕುಮಾರ ಬಸಣ್ಣ ಕುಂಬಾರ(ಬಾವೂರ) ಎಂಬವರಿಗೆ ಸೇರಿದ ಅಮೃತಾ ಜ್ಯೂಲೇರ್ಸ್ ಬಂಗಾರ ಅಂಗಡಿಯಾಗಿದ್ದು ಮಾಲಿಕ ಶಿವಕುಮಾರ ಅವರು ದಿನಾಂಕ: 21/05/2024 ರಂದು ಪ್ರತಿ ದಿನದಂತೆ ವ್ಯಾಪಾರ ಮಾಡಿ ಅಂಗಡಿಯಲ್ಲಿ ಬಂಗಾರದ ಸಾಮಾನುಗಳನ್ನು ಮತ್ತು ವ್ಯಾಪಾರದಿಂದ ಬಂದಂತಹ 4,30,000/– ರೂಗಳನ್ನು ಡ್ರಾದಲ್ಲಿ ಇಟ್ಟು ಅಂಗಡಿಯನ್ನು ಸಾಯಂಕಾಲ 06–00 ಗಂಟೆಗೆ ಬಂದ ಮಾಡಿಕೊಂಡು ಆಸ್ಪತ್ರೆಗೆ ಹೋಗಿ ಉಪಚರಿಸಿಕೊಂಡು ಮನೆಗೆ ಹೋಗಿ ಮರುದಿನ ದಿ.22 ರಂದು ಬೆಳಿಗ್ಗೆ 09–00 ಗಂಟೆಗೆ ಮತ್ತು ಪತ್ನಿ ಜಯಶ್ರೀ ಮಕ್ಕಳಾದ ಮನೋಜ್ ಮತ್ತು ಮನೀತ್ ಎಲ್ಲರೂ ಕೂಡಿಕೊಂಡು ಪ್ರವಾಸಕ್ಕೆ ಅಂತಾ ದಾಂಡೇಲಿಗೆ ಹೋಗಿ ಅಲ್ಲಿ ರಾತ್ರಿ ವಾಸ್ತವ್ಯ ಮಾಡಿದ್ದು ಮರುದಿನ ದಿ.23 ರಂದು ದಾಂಡೇಲಿಯಲ್ಲಿದ್ದಾಗ ಬೆಳಗಿನ 06–30 ಗಂಟೆಯ ಸುಮಾರಿಗೆ ಶಿವಕುಮಾರನ ಪತ್ನಿಯ ಅಪ್ಪನಾದ ಚಿದಾನಂದ ತಂ ಶಂಕ್ರೆಪ್ಪ ಬಡಿಗೇರ ಸಾ॥ ಈವಣಗಿ ಇವರು ಫೋನ್ ಮಾಡಿ ನನ್ನ ಮಗ ನೀಲಕಂಠ ತೀರಿಕೊಂಡಿರುತ್ತಾನೆ ಅಂತಾ ಹೇಳಿದಾಗ ದಾಂಡೇಲಿಯಿಂದ ನೇರವಾಗಿ ಈವಣಗಿ ಗ್ರಾಮಕ್ಕೆ ಮದ್ಯಾಹ್ನ 12–00 ಗಂಟೆ–ಗೆ ಹೋಗಿ ಅಳಿಯನ ಅಂತ್ಯ ಸಂಸ್ಕಾರ ಮಾಡಿ ಅಲ್ಲಿಯೇ ವಾಸ್ತವ್ಯ ಮಾಡಿದ್ದಾರೆ ದಿ. 26 ರಂದು ಬೆಳಿಗ್ಗೆ 09–30 ಗಂಟೆ–ಯ ಸುಮಾರಿಗೆ ಮಲ್ಲನಗೌಡ ಬಿರಾದಾರ ಎಂಬವರು ಶಿವಕುಮಾರನಿಗೆ ಫೋನ್ ಮಾಡಿ ನಿಮ್ಮ ಬಂಗಾರದ ಅಂಗಡಿಯ ಒಳಗಡೆಯ ಬಾಗಿಲು ಮುರಿದು ಕಳುವು ಮಾಡಿದಂತೆ ಕಂಡು ಬರುತ್ತಿದೆ ಬಂದು ನೋಡ್ರಿ ಅಂತಾ ಹೇಳಿದಾಗ ಶಿವಕುಮಾರ ಮತ್ತು ಅಳಿಯ ಅಳಿಯ ವಿರೇಶ ತಂ ಚಿದಾನಂದ ಬಡಿಗೇರ ಸಾ॥ ಈವಣಗಿ ಇಬ್ಬರೂ ಕೂಡಿ ಈವಣಗಿಯಿಂದ ಮದ್ಯಾಹ್ನ 12–00 ಗಂಟೆಗೆ ತಾಳಿಕೋಟಿಗೆ ಬಂದು ಒಳಗಿನ ಬಾಗಿಲು ನೋಡಿದಾಗ ಯಾವುದೋ ವಸ್ತುವಿನಿಂದ ಮೀಟಿ ಬಾಗಿಲನ್ನು ಮುರಿದು ಒಳಗಡೆ ಹೋಗಿ ಡ್ರಾದಲ್ಲಿ ಇಟ್ಟಿದ್ದ ಬಂಗಾರದ ಆಭರಣಗಳು ಮತ್ತು ಡ್ರಾನಲ್ಲಿ ಇಟ್ಟಿದ್ದ 4 ಲಕ್ಷ 30 ಸಾವಿರ ನಗದು ದೋಚಿಕೊಂಡು ಹೋಗಿದ್ದಾರೆಂದು ಶಿವಕುಮಾರ ಅವರು ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಬಂಗಾರದ ಆಭರಣಗಳಾದ 01) 40.450 ಗ್ರಾಂ ಮಿಕ್ಸ್ ಐಟೆಮ್ಸ್‌ಗಳು, 02) 14.770 ಗ್ರಾಂ ನೆಕ್ಲೇಸ್ ಒಂದು, 03) 12.780 ಗ್ರಾಂ ನೆಕ್ಲೇಸ್ ಒಂದು, 04) 10.00 ಗ್ರಾಂ ಗಟ್ಟಿ ಗುಂಡುಗಳು, 05) 10.00 ಗ್ರಾಂ ದ ಕಿವಿಯಲ್ಲಿ ಹಾಕಿಕೊಳ್ಳವ ಉಂಗುರುಗಳು ಮತ್ತು ಟಾಪ್ಸ್ ಗಳು, 06) 18.860 ಗ್ರಾಂ ಕಿವಿಯ ರಿಂಗಗಳು, 07) 51.380 ಗ್ರಾಂ ಕಿವಿಯೋಲೆಗಳು, 08) 22.800 ಗ್ರಾಂ ಸೈಡ್ ರಿಂಗ್ ಮುಕರ್‌ಂಗಳು, 09) 20.00 ಗ್ರಾಂ ಕಿವಿಯಲ್ಲಿಯ ಚೈನ್ ಮತ್ತು ಮಾಟೀಲಗಳು, 10) 16.00 ಗ್ರಾಂ ಹೆಣ್ಣು ಮಕ್ಕಳು ಮತ್ತು ಗಂಡಸರು ಹಾಕಿಕೊಳ್ಳುವ ಉಂಗುರುಗಳು, 11) 6.200 ಗ್ರಾಂ ಬೇಬಿ ರಿಂಗಗಳು, 12) 43.00 ಗ್ರಾಂ ಜಮಕೆಗಳು 09 ಜೋಡು, 13) 180 ಗ್ರಾಂ ಮಿಕ್ಸ್ ಸಾಮಾನುಗಳು ಈ ಪ್ರಕಾರ ಒಟ್ಟು 446.24 ಗ್ರಾಂ ಒಳಗೊಂಡು ಒಟ್ಟು 31,22,000/– ಚಿನ್ನಾಬರಣಗಳು ಅಲ್ಲದೇ ಡ್ರಾನಲ್ಲಿ ಇಟ್ಟಿದ್ದ 4,30,000/– ರೂಗಳನ್ನು ಕಳುವು ಮಾಡಿಕೊಂಡು ಹೋಗಿದ್ದಾರೆಂದು ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಅಂಗಡಿಗೆ ಅಳವಡಿಸಿದ ಸಿಸಿ ಕ್ಯಾಮೇರಾ ಫುಟೇಜ್ ನೋಡಲಾಗಿ ಯಾರೋ ಮೂರು ಜನರು ಅಜಮಾಸ 30 ರಿಂದ 35 ವರ್ಷ ವಯಸ್ಸಿನವರು ದಿನಾಂಕ: 22/05/2024 ರಂದು ರಾತ್ರಿ 09–40 ಗಂಟೆಯಿಂದ ದಿನಾಂಕ: 26/05/2024 ರಂದು ಮುಂಜಾನೆ 08–00 ಗಂಟೆ–ಯ ನಡುವಿನ ಅವಧಿಯಲ್ಲಿ ನಮ್ಮ ಅಂಗಡಿಯಲ್ಲಿಯ ವಿದ್ಯುತ್ ಸಂಪರ್ಕ ಕಡಿತಗೊಳಿಸಿ ನಮ್ಮ ಅಂಗಡಿ ಕಳುವು ಮಾಡಿಕೊಂಡು ಹೋಗಿದ್ದಾರೆಂದು ಪೊಲೀಸ್ ಠಾಣೆಗೆ ಅಂಗಡಿ ಮಾಲಿಕ ಶಿವಕುಮಾರ ಕುಂಬಾರ ಅವರು ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಈ ಕುರಿತು ತಾಳಿಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರ್ಣ ದಾಖಲಾಗಿದ್ದು ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವನೆ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಸವರಾಜ ಹಟ್ಟಿ, ಡಿಎಸ್‌ಪಿ ಬಾಲಪ್ಪ ನಂದಗಾವಿ, ಸಿಪಿಐ ಮಲ್ಲಿಕಾರ್ಜುನ ತುಳಸಿಗೇರಿ, ಪಿಎಸ್‌ಐ ಮಹ್ಮದತೋಸಿಫ್ ಘೋರಿ, ಆರ್.ಡಿ.ಲಮಾಣಿ ಅವರು ಬೆಟ್ಟಿ ನೀಡಿ ಬೆರಳಚ್ಚು ತಜ್ಞರು ಮತ್ತು ಶ್ವಾನದಳದೊಂದಿಗೆ ಪರಿಶೀಲನೆ ನಡೆಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

## ಭೂ ಹಗರಣ ಸಿಓಡಿ ತನಿಖೆಗೆ ಸರ್ಕಾರಕ್ಕೆ ಮನವಿ ಮಾಡುವೆ: ಸಚಿವ ಡಾ.ಎಂ.ಬಿ. ಪಾಟೀಲ



**ವಿಜಯಪುರ :** ವಿಜಯಪುರ ಜಿಲ್ಲೆಯಲ್ಲಿ ನಡೆದಿದೆ ಎನ್ನಲಾದ ಭೂ ಹಗರಣ ಸಿಓಡಿ ತನಿಖೆ ನಡೆಸಲು ಸರ್ಕಾರಕ್ಕೆ ನಾನು ಸಹ ಮನವಿ ಮಾಡಿಕೊಳ್ಳುವೆ ಎಂದು ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ. ಪಾಟೀಲ ಭರವಸೆ ನೀಡಿದರು.

ಭೂ ಹಗರಣದ ವಿರುದ್ಧ ಸಮರ ಸಾರಿರುವ ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಅವರು ಬೆಂಗಳೂರಿನಲ್ಲಿ ಸಚಿವ ಡಾ.ಎಂ.ಬಿ. ಪಾಟೀಲರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಈ ಭರವಸೆಯನ್ನು ಸಚಿವ ಪಾಟೀಲ ನೀಡಿದರು.

ಭೂಗರಣಗಳ ಕುರಿತು ವಿವರಿಸಿದ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ವಿಜಯಪುರ ನಗರದಲ್ಲಿ ನಕಲಿ ಭೂ–ದಾಖಲೆ ಸೃಷ್ಟಿ ಮಾಡಿ ಜನರನ್ನು ದೊಡ್ಡ ಪ್ರಮಾಣದಲ್ಲಿ ವಂಚನೆ ಮಾಡುತ್ತಿರುವ ಅನೇಕ ಪ್ರಕರಣಗಳು ನಡೆಯುತ್ತಿವೆ. ಇದರಿಂದ ಬಡಜನರು ನಿತ್ಯ ಶೋಷಣೆಗೊಳಗಾಗುತ್ತಿದ್ದಾರೆ. ಜಮೀನು ಹಾಗೂ ನಿವೇಶನಗಳ ಖೊಟ್ಟಿ ದಾಖಲೆ ಸೃಷ್ಟಿ ಮಾಡಿ ಉಪನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ಖರೀದಿ ಹಾಗೂ ಮಾರಾಟ ಮಾಡುವ ಕಾನೂನು ಬಾಹಿರ ಕೃತ್ಯಗಳು ಅವ್ಯಾಹತವಾಗಿ ನಡೆದಿವೆ ಎಂದರು. ಜನರನ್ನು ವಂಚಿಸುವ ವ್ಯವಸ್ಥಿತ ಜಾಲವೇ ಜಿಲ್ಲೆಯಲ್ಲಿ ಹುಟ್ಟಿಕೊಂಡಿದೆ. ಈ ಜಾಲಕ್ಕೆ ಈಗಾಗಲೇ ನೂರಾರು ಜನ ಹಣ–ಆಸ್ತಿ ಕಳೆದುಕೊಂಡಿದ್ದಾರೆ. ಇಂತಹ ವಂಚಕರ ಜಾಲ ವಿಜಯಪುರ ಜಿಲ್ಲೆ ಹಾಗೂ ನಗರದಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಸಾಕಷ್ಟು ಬಡ ಜನರು ಈಗಾಗಲೇ ಮೋಸ ಹೋಗಿದ್ದಾರೆ. ಕಷ್ಟಪಟ್ಟು ದುಡಿದು, ಸಾಲ–ಸೋಲ ಮಾಡಿ ನಿವೇಶನ, ಜಮೀನು ಖರೀದಿ ಮಾಡುವ ಬಡವರು, ಈ ರೀತಿಯ ವಂಚನೆಗೆ ಒಳಗಾಗಿ ತಮ್ಮ ಆಸ್ತಿ ಕಳೆದುಕೊಂಡು ಕಷ್ಟ ಅನುಭವಿಸುತ್ತಿದ್ದಾರೆ.

ಈ ಜಾಲಕ್ಕೆ ಸಿಲುಕಿ ವಂಚನೆಗೊಳಗಾದವರು ಹಾಗೂ ಜಮೀನು ಕಳೆದುಕೊಂಡವರು ಪೊಲೀಸ್ ಠಾಣೆಗೆ ದೂರು ನೀಡಿ–ದರೂ ಯಾವ ಪ್ರಯೋಜನವೂ ಆಗುತ್ತಿಲ್ಲ ಎಂದರು.

ಈಗಾಗಲೇ ಜಿಲ್ಲಾ ಪೊಲೀಸ್ ಅಧೀಕ್ಷಕರನ್ನು ಭೇಟಿ ಮಾಡಿ ಈ ಬಗ್ಗೆ ವಿಶೇಷ ತಂಡ ರಚನೆ ಮಾಡುವಂತೆ ಒತ್ತಾಯಿಸಿದ್ದೇನೆ, ಹಲವಾರು ಬಾರಿ ಪತ್ರಿಕಾಗೋಷ್ಠಿ ಮುಖಾಂತರವೂ ಒತ್ತಾಯಿಸಿದ್ದೇನೆ ಎಂದು ಸಮಗ್ರವಾಗಿ ವಿವರಿಸಿದರು.

ತಾವು ಸಹ ಈ ಹಿಂದೆ ಜಿಲ್ಲಾ ಪಂಚಾಯತ ಸಭೆಯಲ್ಲಿ ಈ ವಿಷಯ ಪ್ರಸ್ತಾಪ ಮಾಡಿದ್ದೀರಿ, ಹೀಗಾಗಿ ಸರ್ಕಾರದ ಮೇಲೆ ಒತ್ತಡ ಹೇರಿ ಈ ರೀತಿ ಪ್ರಕರಣಗಳ ತನಿಖೆ ನಡೆಸಿ,

ಈ ರೀತಿ ಪ್ರಕರಣ ನಡೆಯದಂತೆ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಲು ಸರ್ಕಾರದ ಗಮನ ಸೆಳೆಯಬೇಕು ಎಂದು ಕೋರಿದರು. ಇದೇ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಜಗದೀಶ್ ಮುಚ್ಚಂಡಿ ಉಪಸ್ಥಿತರಿದ್ದರು.

## ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಬಿತ್ತನೆ ಬೀಜ ದೊರೆಯುವಂತೆ ಮಾಡಲು ಆಗ್ರಹ

## ಕೃಷಿ ಪರಿಕರಗಳ ಅವಧಿ 7ರಿಂದ 3 ವರ್ಷಕ್ಕೆ ಇಳಿಸಲು ರೈತರಿಂದ ಆಗ್ರಹ



**ವಿಜಯಪುರ :** ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರೈತರ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳನ್ನು ದೊರೆಯುವಂತೆ ಮಾಡಬೇಕು, ಹಳ್ಳಿಗಳಿಂದ ತಾಲೂಕಿನ ರೈತ ಸಂಪರ್ಕ ಕೇಂದ್ರಗಳಿಗೆ ಬಂದು ಹೋಗುವುದು ರೈತರಿಗೆ ಕಷ್ಟವಾಗಲಿದೆ, ಬಿಸಿಲಿನಲ್ಲಿ ಸರತಿ ಸಾಲಿನಲ್ಲಿ ನಿಂತು ತೆಗೆದುಕೊಳ್ಳುವುದು ತಪ್ಪುತ್ತದೆ, ಜಿಲ್ಲೆಯ ಸಣ್ಣ ಸಣ್ಣ ಹೊಟೆಲ, ಕಿರಾಣಿ ಅಂಗಡಿ, ಝರಾಕ್ಸ್ ಅಂಗಡಿಗಳಲ್ಲಿ ಮಾರಾಟ ಮಾಡುತ್ತಿದ್ದಾರೆ, ಎಂದು ಕರ್ನಾಟ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಜಿಲ್ಲಾ ಕೃಷಿ ಜಂಟಿ ನಿರ್ದೇಶಕರಿಗೆ ಮನವಿ ಸಲ್ಲಿಸಿ ಅಂತವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ಅವರ ಪರವಾನಿಗೆಯನ್ನು ಶಾಶ್ವತವಾಗಿ ರದ್ದು ಮಾಡಬೇಕೆಂದು ಆಗ್ರಹಿಸಿದರು.

ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ಮನವಿ ಸಲ್ಲಿಸಿ ಮಾತನಾಡುತ್ತಾ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಜಾಗೃತಿದಳ ಹೆಚ್ಚಿಗೆ ಮಾಡಬೇಕು, ಇಲಾಖೆಯ ಪರವಾನಿಗೆ ಪಡೆಯದೇ ಅನಧಿಕೃತ ಮತ್ತು ಕಳಪೆ ಬೀಜ, ರಸಗೊಬ್ಬರ, ಕೀಟನಾಶಕ ಮಾರಾಟ ಮಾಡುತ್ತಿರುವವರ ವಿರುದ್ಧ ಪ್ರಕರಣ ದಾಖಲಿಸಿ ಸೂಕ್ತ

ಕಾನೂನು ಕ್ರಮ ಕೈಗೊಳ್ಳಬೇಕು, ಇದರಿಂದ ಮುಗ್ದ ರೈತರು ಅನ್ಯಾಯಕ್ಕೊಳಗಾಗಿ ಸಾಲದ ಬಾಧೆಯಿಂದ ರೈತ ಆತ್ಮಹತ್ಯೆ ಮಾಡಿಕೊಳ್ಳುವುದು ತಪ್ಪುತ್ತದೆ. ಅನಧಿಕೃತ ಟಾನಿಕ ಹೆಸರಿನಲ್ಲಿ ಬಯೋ ಎಂಭ ಹೆಸರಿನಲ್ಲಿ ವಿಷವನ್ನು ಮಾರಾಟ ಮಾಡುತ್ತಿರುವುದು ಕಂಡುಬಂದಿದೆ, ಅವುಗಳನ್ನು ತಜ್ಞರಿಂದ (ಲ್ಯಾಬ್‌ಟೆಸ್ಟ್) ತಪಾಸಣೆ ಮಾಡಿ, ರೈತರಿಗೂ ಹಾಗೂ ಸರಕಾರಕ್ಕೂ ಆಗುತ್ತಿರುವ ಮೊಸವನ್ನು ತಡೆಯಬೇಕು ಎಂದರು

ರಾಮಸಿಂಗ ರಜಪೂತ ಅವರು ಮಾತನಾಡುತ್ತಾ ರೈತಸಂಪರ್ಕ ಕೇಂದ್ರಗಳಲ್ಲಿ ರೈತರಿಗೆ ರಿಯಾಯಿತಿ ದರದಲ್ಲಿ ಕೊಡುವ ಕೃಷಿ ಪರಿಕರಗಳು ಚೊಲೊ ಬಂದಿಲ್ಲ, ಗುಣಮಟ್ಟದ ಸಾಮನಿ ಕೊಡ್ರಿ ಯಾ–ಕೆಂದರೆ ಒಮ್ಮೆ ಸಾಲಸೊಲ ಮಾಡಿ ಸಾಮಾನಿ ಮಾಡಿಕೊಳ್ಳುವುದು ಸಾಕಷ್ಟು ತೊಂದರೆ ಆಗ್ಯಾದ, ಅವು ಚಲೋ ಬರಲಿಲ್ಲ ಅಂದರ ಮತ್ತ ಸಾಲಸೋಲ ಮಾಡಬೇಕಾತಾದ ಎಂದರು

ಈ ವೇಳೆ ತಾ. ಉಪಾಧ್ಯಕ್ಷರಾದ ಪ್ರಕಾಶ ತೇಲಿ, ಆಹೇರಿ ಗ್ರಾ.ಪಂ ಮಮಾಜಿ ಅರ್ಧಕ್ಷರಾದ ಬಸವರಾಜಗಾಣಗೇರ, ರಾಮಸಿಂಗರಜಪೂತ, ಬಸವರಾಜಹಡಪದ,

ಅಶೋಕಕನ್ನೂರ ,ರಾಜಾರಾಮಸಿಂಗ ಕೊಳುರ, ಬಸವರಾಜ ಗುದಳೆ, ರವಿ ಗೆರಡೆ, ಶ್ರೀಶೈಲ ಮಸೂತಿ, ರಾಜು ಕೇರೂರ, ಬಸವರಾಜ ಮಸೂತಿ, ರಾಜಾರಾಮಸಿಂಗ ಡೊಣೂರ, ಹಣಮಂತ ಶೆಗಣೂಶಿ, ಪರಸು ಚಿಕ್ಕಲಕಿ,ಬಸವರಾಜಕಲ್ಬುಗಿರ್,ಮಲುಕುಅಕ್ಕಿಹುಗ್ಗಿ,ಮಲ್ಲನಗೌಡಬಿರಾದಾರ, ಸೋಮಯ್ಯ ದೊಡಮನಿ, ಮಹಾಂತೇಶಹತ್ತರಕಿ, ಭೀಮು ಚಿಮ್ಮಲಗಿ, ಮಹಾಂತೇಶ ಗೆರಡೆ ಸೇರಿದಂತೆ ಇತರರು ಇದ್ದರು.

## ಯಶಸ್ಸಿನ ಅಮಲಿನಲ್ಲಿ ಮೈಮರೆಯದಿರಿ–ಪಿಡಿಓ ಬಿರಾದರ

# ಸಾಧಕ ವಿದ್ಯಾರ್ಥಿಗಳಿಗೆ ಪೌರ ಸಮ್ಮಾನ




**ಚಿಮ್ಮಡ :** ಕಷ್ಟಪಟ್ಟು ಪ್ರಯತ್ನಿಸಿದರೆ ಯಾವುದೇ ಸಾಧನೆ ಸಾಧ್ಯ ಆದರೆ ಯಶಸ್ಸಿನ ಅಮಲಿನಲ್ಲಿ ಮೈಮರೆತರೆ ಗುರಿ ತಲುಪುವುದು ಕಷ್ಟದಾಯಕವಾಗಲಿದೆ ಎಂದು ಗ್ರಾ.ಪಂ. ಅಭಿವೃದ್ದಿ ಅಧಿಕಾರಿ ಶಿವಾನಂದ ಬಿರಾದರ ಹೇಳಿದರು.

ಗ್ರಾಮದ ಪಂಚಾಯತಿ ಸಭಾಭವನದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಸಾಧಕ ವಿದ್ಯಾರ್ಥಿಗಳ ಪೌರ ಸಮ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಈ ಸಾಧನೆ ವಿದ್ಯಾರ್ಥಿ ಜೀವನದ ಮೊದಲ ಹೆಜ್ಜೆಯಾಗಿದ್ದು ಗುರಿ ತಲುಪುವುದು ಇನ್ನೂ ದೂರದಲ್ಲಿದೆ ಅದಕ್ಕೆ ಆರಂಭದಲ್ಲಿಯೇ ಮೈಮರೆತು ಮುಂದಿನ ಜೀವನವನ್ನು ನಿರ್ಲಕ್ಷ ಮಾಡಬೇಡಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸ್ಥಳಿಯ ಸರಕಾರಿ ಪದವಿಪೂರ್ವ ವಿದ್ಯಾಲಯದ ಪ್ರಾದ್ಯಾಪಕ ಬಿ.ಬಿ. ಕುದರಿಮನಿ ಮಾತನಾಡಿ ಗ್ರಾಮದಲ್ಲಿ ಹಲವಾರು ಸೌಲಭ್ಯಗಳ ಕೊರತೆಯ ನಡುವೆಯೂ 100 ಪ್ರತಿಶತ ಫಲಿತಾಂಶ ಅದರಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಅತ್ಯತ್ತಮ ಫಲಿತಾಂಶ ಪಡೆದುಕೊಂಡಿರುವುದು ನಮ್ಮ ಸರಕಾರಿ ಪದವಿಪೂರ್ವ ವಿದ್ಯಾಲಯದ ಸಾಧನೆ. ಇದಕ್ಕೆ ವಿದ್ಯಾರ್ಥಿಗಳ ಸತತ ಪರೀಶ್ರಮ, ಗ್ರಾಮಸ್ಥರ ಸಹಕಾರ ಪ್ರಮುಖ ಕಾರಣವಾಗಿದೆ ಎಂದರು. ಸರಕಾರಿ ಪ್ರೌಢಶಾಲೆಯ ಪ್ರಭಾರ ಮುಖ್ಯೋಪಾದ್ಯಾಯೆ ಶ್ರೀಮತಿ ಎಂ.ಎಸ್.ಜಿಟ್ಟಿ, ಸಿಆರ್‌ಪಿ ಸಮನ್ವಯ ಅಧಿಕಾರಿ ಶ್ರೀಮತಿ ದ್ರಾಕ್ಷಾಯಿಣಿ ಮಂಡಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಮಾಲಾ ಅಶೋಕ ಮೋಟಗಿ ವಹಿಸಿದ್ದರು. ಉಪಾಧ್ಯಕ್ಷೆ ಶ್ರೀಮತಿ ಪ್ರೇಮಾ ಪ್ರಭು ಗೋವಿಂದಗೋಳ, ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪುಜಾರಿ, ಆನಂದ ಕವಟಿ, ತಾ.ಪಂ. ಮಾಜಿ ಉಪಾಧ್ಯಕ್ಷ ಪ್ರಭು ಮುಧೋಳ, ಮನೋಜ ಹಟ್ಟಿ, ಅಸೋಕ ಮೋಟಗಿ, ಬಾಳೇಶ ಬ್ಯಾಕೋಡ, ಅಶೋಕ ಧಡೂತಿ, ರಮೇಶ ಮೇತ್ರಿ, ನಾಗಪ್ಪಾ ಆಲಕನೂರ, ಶ್ರೀಮತಿ ಮೇಘಾ ಗಾಣಿಗೇರ, ಶ್ರೀಮತಿ ಬಂಗಾರೆವ್ವ ಜಾಲಿಕಟ್ಟಿ, ಪ್ರಾದ್ಯಾಪಕ ಹಣಮಂತ ಕುಂಬಾರ ಸೇರಿದಂತೆ ಹಲವಾರು ಜನ ಪ್ರಮುಖರು ಉಪಸ್ಥಿತರಿದ್ದರು.

ಇದೇ ಸಂಧರ್ಬದಲ್ಲಿ ಸ್ಥಳಿಯ ಸರಕಾರಿ ಪದವಿಪೂರ್ವ ವಿದ್ಯಾಲಯದಲ್ಲಿ ಹಾಗೂ ಸರಕಾರಿ ಪ್ರೌಢಶಾಲೆಯಲ್ಲಿ ಮತ್ತು ಎನ್‌ಎಂಎಂಎಸ್ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕದೊಂದಿಗೆ ತೇರ್ಗಡೆ ಹೊಂದಿದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಗ್ರಾಮ ಪಂಚಾಯತಿಯಿಂದ ಸತ್ಕರಿಸಿ ನಗದು ನೀಡಿ ಗೌರವಿಸಲಾಯಿತು.



ವಿಧಾನ ಪರಿಷತ್ ಅಭ್ಯರ್ಥಿಯಾಗಿ ಆಯ್ಕೆ ಆಗಿರುವ ಬಲ್ಕಿಷ್ ಬಾನು ಅವರು ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾವೇರಿಯಲ್ಲಿ ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು. ಮುಖ್ಯಮಂತ್ರಿಗಳು ಶುಭ ಹಾರೈಸಿದರು.

## ರಾಜ್ಯ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆ

# ವಿವಿಧ ಅಧಿಸೂಚಿತ ಬೆಳೆಗಳಿಗೆ ನೊಂದಣಿ: ಜಾನಕಿ




**ಬಾಗಲಕೋಟೆ :** ಪ್ರಸಕ್ತ ಮುಂಗಾರು ಹಂಗಾಮಿಗಾಗಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆಯಡಿ ರೈತರು ಅಧಿಸೂಚಿತ ಬೆಳೆಗಳ ನೋಂದಣಿಗೆ ಸರಕಾರ ಅಧಿಸೂಚನೆ ಹೊರಡಿಸಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆ ಅನುಷ್ಠಾನ ಕುರಿತ ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಅಧಿಸೂಚಿತ ಬೆಳೆಗಳಿಗೆ ಬೆಳೆಸಾಲ ಪಡೆದ ರೈತರಿಗೆ ಈ ಯೋಜನೆ ಕಡ್ಡಾಯವಾಗಿದ್ದು, ಒಂದು ವೇಳೆ ಬೆಳೆಸಾಲ ಪಡೆದ ರೈತರು ಈ ಯೋಜನೆಯಡಿ ಭಾಗವಹಿಸಲು ಇಚ್ಚಿಸದೇ ಇದ್ದಲ್ಲಿ, ಈ ಕುರಿತು ಬ್ಯಾಂಕಿನ ವ್ಯವಸ್ಥಾಪಕರಿಗೆ ಬೆಳೆ ನೋಂದಣಿಯ ಅಂತಿಮ ದಿನಾಂಕಕ್ಕಿಂತ 7 ದಿನಗಳ ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದಲ್ಲಿ ಅಂತಹ ರೈತರನ್ನು ಬೆಳೆ ವಿಮೆ ಯೋಜನೆಯಿಂದ ಕೈಬಿಡಲಾಗುವುದೆಂದು ತಿಳಿಸಿದರು.

ಬೆಳೆಸಾಲ ಪಡೆಯದ ರೈತರಿಗೆ ಬೆಳೆ ವಿಮೆ ಯೋಜನೆಯು ಐಚ್ಛಿಕವಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಜಿಲ್ಲೆಗೆ ಯುನಿವರ್ಸಲ್ ಸೊಂಪೊ ಜಿ.ಐ.ಸಿ. ವಿಮಾ ಕಂಪನಿ ಆಯ್ಕೆಯಾಗಿದ್ದು, ಆಸಕ್ತ ರೈತರು ಕೊನೆಯ ದಿನಾಂಕದವರೆಗೆ ಕಾಯದೆ ಅಧಿಸೂಚಿತ ಬೆಳೆಗೆ ಬ್ಯಾಂಕ್, ಆರ್ಥಿಕ ಸಂಸ್ಥೆಗಳು, ಸಾಮಾನ್ಯ ಸೇವಾ ಕೇಂದ್ರಗಳು, ಕರ್ನಾಟಕ ಒನ್, ಗ್ರಾಮ ಒನ್ ಕೇಂದ್ರಗಳಲ್ಲಿ ವಿಮಾ ಕಂತು ತುಂಬಿ ಬೆಳೆಗೆ ವಿಮೆ ಮಾಡಿಸಬಹುದಾಗಿದೆ. ಮುಂಗಾರು ಹಂಗಾಮಿನಲ್ಲಿ ಆಹಾರ ಬೆಳೆಗಳಿಗೆ ಬೆಳೆ ವಿಸ್ತೀರ್ಣಕ್ಕೆ ತಕ್ಕಂತೆ ಬೆಳೆ ವಿಮಾ ಕಂತಿನ ಶೇಕಡಾ 2 ರಷ್ಟು ಹಾಗೂ ವಾಣಿಜ್ಯ ಬೆಳೆಗಳಿಗೆ ಬೆಳೆ ವಿಮಾ ಕಂತಿನ ಶೇಕಡಾ 5 ರಷ್ಟು ರೈತರು ಪಾವತಿಸಬೇಕು ಎಂದರು.

ಸ್ಥಳೀಯ ಗಂಡಾಂತರಗಳಾದ ಆಲಿಕಲ್ಲು ಮಳೆ, ಭೂ ಕುಸಿತ, ಬೆಳೆ ಮುಳುಗಡೆ, ಮೇಘ ಸ್ಪೋಟ ಮತ್ತು ಗುಡುಗು ಮಿಂಚುಗಳಿಂದಾಗಿ ಆಗುವ ಬೆಂಕಿ ಅವಘಡ, ಬೆಳೆ ನಷ್ಟ ಸಂಭವಿಸಿದರೆ, ಬೆಳೆ ವಿಮೆ ಮಾಡಿಸಿರುವ ರೈತರು ಈ ಬಗ್ಗೆ ನೇರವಾಗಿ ಸಂಬಂಧಪಟ್ಟ ಅನುಷ್ಠಾನಗೊಳಿಸುವ ವಿಮಾ ಸಂಸ್ಥೆಗಳ ಕಛೇರಿಗಳಿಗೆ ಅಥವಾ ಹಣಕಾಸು ಸಂಸ್ಥೆ ಅಥವಾ ಕೃಷಿ, ತೋಟಗಾರಿಕೆ ಇಲಾಖೆ ಮೂಲಕ ತಕ್ಷಣ ಸೂಚನೆ ನೀಡತಕ್ಕದ್ದು. ಇಂತಹ ಸಂದರ್ಭದಲ್ಲಿ ವಿಮೆ ಮಾಡಿಸಿದ ಬೆಳೆಯ ವಿವರಗಳನ್ನು, ಹಾನಿಯ ವ್ಯಾಪ್ತಿ ಹಾಗೂ ಹಾನಿಗೆ ಕಾರಣಗಳನ್ನು 72 ಗಂಟೆಗಳೊಳಗಾಗಿ ತಿಳಿಸತಕ್ಕದ್ದು ಎಂದು ತಿಳಿಸಿದರು.

ಈ ಯೋಜನೆಯಡಿ 2024ರ ಮುಂಗಾರು ಹಂಗಾಮಿನಡಿಯಲ್ಲಿ ಕಟಾವಿನ ನಂತರ ಬೆಳೆಯನ್ನು ಜಮೀನಿನಲ್ಲೆ ಒಣಗಲು ಬಿಟ್ಟಂತಹ ಸಂದರ್ಭದಲ್ಲಿ ಕಟಾವು ಮಾಡಿದ ಎರಡು ವಾರಗಳೊಳಗೆ (ಹದಿನಾಲ್ಕು ದಿನಗಳು) ಚಂಡಮಾರುತ, ಚಂಡಮಾರುತ ಸಹಿತ ಮಳೆ ಮತ್ತು ಅಕಾಲಿಕ ಮಳೆಯಿಂದಾಗಿ ಬೆಳೆ ನಾಶವಾದರೆ ವೈಯಕ್ತಿಕವಾಗಿ ವಿಮಾ ಸಂಸ್ಥೆಯು ನಷ್ಟ ನಿರ್ಧಾರ ಮಾಡಿ ಬೆಳೆ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಒಳಪಡಿಸಲಾಗಿದೆ. ಬೆಳೆ ವಿಮೆ ಮಾಡಿಸುವ ರೈತರು ಫ್ರೂಟ್ಸ್ ತಂತ್ರಾಂಶದ ಎಫ್‌ಐಡಿ ಹೊಂದಿರುವುದು ಕಡ್ಡಾಯವಾಗಿದೆ.

ಬೆಳೆ ವಿಮೆ ಯೋಜನೆಯ ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ, ತಾಲೂಕ ಕೃಷಿ, ತೋಟಗಾರಿಕೆ ಇಲಾಖೆ ಹಾಗೂ ಬೆಳೆ ವಿಮೆ ಸಂಸ್ಥೆ ಕಛೇರಿಗೆ ಅಥವಾ https://www.samrakshane.karnataka.gov.in ಜಾಲತಾಣ ಭೇಟಿ ನೀಡಬಹುದಾಗಿದೆ ಎಂದು ತಿಳಿಸಿದರು.

ಈ ಬಗ್ಗೆ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಪ್ರಚಾರ ಕೈಗೊಳ್ಳಲು ಸಹ ಜಿಲ್ಲಾಧಿಕಾರಿಗಳು ಸೂಚಿಸಿದರು.

### ಬೆಳೆ ವಿಮಾ ಕಂತು ಪಾವತಿ ವಿವರ

**ಸೋಯಾ ಅವರೆ, ಉದ್ದು, ಹೆಸರು (ಮಳೆ ಆಶ್ರಿತ), ಜೋಳ (ನೀರಾವರಿ) ಬೆಳೆಗೆ ವಿಮಾ ಕಂತು ಪಾವತಿಗೆ ಜುಲೈ 15 ಕೊನೆಯ ದಿನವಾದರೆ, ಅರಿಶಿಣ, ಸೂರ್ಯಕ್ರಾಂ, ಜೋಳ, ಈರುಳ್ಳಿ, ಎಳ್ಳು (ಮ.ಆ), ಕೆಂಪು ಮೆಣಸಿಣಕಾಯಿ (ನೀರಾವರಿ), ಮುಸುಕಿನ ಜೋಳ, ಸಜ್ಜೆ, ತೊಗರಿ, ಶೇಂಗಾ (ಮ.ಆ, ನೀ) ಬೆಳೆಗಳಿಗೆ ಜುಲೈ 31, ಸೂರ್ಯಕ್ರಾಂತಿ (ನೀರಾವರಿ) ಈರುಳ್ಳಿ (ನೀ, ಮ.ಆ), ಕೆಂಪು ಮೆಣಸಿನ ಕಾಯಿ (ಮ.ಆ) ಬೆಳೆಗೆ ಆಗಸ್ಟ 16 ಕೊನೆಯ ದಿನವಾಗಿದೆ.**

## ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿ




**ರಬಕವಿ–ಬನಹಟ್ಟಿ :** ಯುವ ವಕೀಲರು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದರೆ ಮುಂದಿನ ದಿನಗಳಲ್ಲಿ ಹೆಚ್ಚಿನ ಕಕ್ಷಿದಾರರನ್ನು ಹೊಂದಲು ಸಾಧ್ಯವಾಗುತ್ತದೆ. ವಕೀಲರು ತಮ್ಮ ಹೆಚ್ಚಿನ ಸಮಯವನ್ನು ಬಾರ್ ರೂಮಿನಲ್ಲಿ ಕಳೆಯದೇ ತೆರೆದ ನ್ಯಾಯಾಲಯದಲ್ಲಿ ಕಳೆಯಬೇಕು. ವಾದ ವಿವಾದಗಳನ್ನು ಸರಿಯಾಗಿ ಆಲಿಸಿ, ಅಧ್ಯಯನ ಮಾಡುವುದರಿಂದ ಭವಿಷ್ಯದಲ್ಲಿ ಉತ್ತಮ ವಕೀಲರಾಗಲು ಸಾಧ್ಯ ಎಂದು ಜಮಖಂಡಿ ಜಿಲ್ಲಾ ನ್ಯಾಯಾಲಯದಿಂದ ಸೇವಾ ನಿವೃತ್ತಿ ಹೊಂದಿದ ಸರ್ಕಾರಿ ಅಭಿಯೋಜಕ ಎಂ. ಐ. ಸಂಗತ್ರಾಸ್ ತಿಳಿಸಿದರು.

ಶನಿವಾರ ಇಲ್ಲಿನ ವಕೀಲರ ಸಂಘವು ಸೇವಾ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಕೀಲರು ನಿರಂತರ ಅಧ್ಯಯನದಲ್ಲಿ ತೊಡಗಿಸಿಕೊಳ್ಳಬೇಕು ಮತ್ತು ಹಿರಿಯ ವಕೀಲರ ಮಾರ್ಗದರ್ಶನವನ್ನು ಪಡೆದುಕೊಳ್ಳಬೇಕು ಎಂದು ಸಂಗತ್ರಾಸ್ ತಿಳಿಸಿದರು.

ಹಿರಿಯ ವಕೀಲ ಎಂ. ಜಿ. ಕೆರೂರ ಮಾತನಾಡಿ, ಸರ್ಕಾರಿ ಸೇವೆಯಲ್ಲಿ ಯಾವುದೇ ಕಲಂಕ ಇಲ್ಲದೆ ಸೇವೆ ನಿರ್ವಹಣೆ ಮಾಡುವುದು ಕಷ್ಟ ಸಾಧ್ಯ. ಮುಂದಿನ ದಿನಗಳಲ್ಲಿ ಯುವಕರು ನಿವೃತ್ತರಾದ ಸರ್ಕಾರಿ ಅಭಿಯೋಜಕರಿಂದ ಸಹಾಯ ಪಡೆದುಕೊಂಡು ಉತ್ತಮ ವಕೀಲರಾಗಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹಿರಿಯ ವಕೀಲರಾದ ಸುರೇಶ ಗೊಳಸಂಗಿ ಮತ್ತು ವಕೀಲರ ಸಂಘದ ಅಧ್ಯಕ್ಷ ಶ್ರೀಕಾಂತ ಗಾಯಕವಾಡ, ವರ್ಧಮಾನ ಕೋರಿ ಮಾತನಾಡಿದರು.

ರಾಜು ಫಕೀರಪೂರ, ಮಹಾಂತೇಶ ಪದ್ಮಗೊಂಡ, ಸುಜಾತಾ ನಡೋಣಿ, ಎ. ಜಿ. ಸಲಬನ್ನವರ, ಬಸವರಾಜ ಭೂತಿ, ಬಾಲಚಂದ್ರ ಕಾರವೆ9ಕರ್, ರವೀಂದ್ರ ಸಂಪಗಾಂವಿ, ರಾಜಕುಮಾರ ಬೋಳಗೊಂಡ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ತಂಬಾಕನ್ನು ತ್ಯಜಿಸಿ, ಔಷಧೀ ಗುಣವುಳ್ಳ ವಿಳ್ಳೆದೆಲೆ ಸೇವಿಸಿ: ಮಹೇಶ ಅಥಣಿ




**ಬಾಗಲಕೋಟೆ :** ವಿಶ್ವ ತಂಬಾಕು ರಹಿತ ದಿನಾಚಾರಣೆ ಹಿನ್ನೆಲೆಯಲ್ಲಿ ನವನಗರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಬಿ.ವ್ಹಿ.ವ್ಹಿ. ಎಸ್ .ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಿಂದ ಮಾರುಕಟ್ಟೆಯ ಸಿಬ್ಬಂದಿ ಹಾಗೂ ಕೂಲಿ ಕಾರ್ಮಿಕರಿಗಾಗಿ ಆಯೋಜಿಸಿದ ವಿಶ್ವ ತಂಬಾಕು ರಹಿತ ದಿನಾಚಾರಣೆ ಕಾರ್ಯಕ್ರಮಲ್ಲಿ ಬವಿವಿ ಸಂಘದ ಕಾರ್ಯದರ್ಶಿಗಳಾದ ಮಹೇಶ ಅಥಣಿ ಸಸಿಗೆ ನೀರುನಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಾ ನನ್ನ ಆರೋಗ್ಯ, ನನ್ನ ಕುಟುಂಬ, ನನ್ನ ಸಮಾಜ, ನನ್ನ ದೇಶ ಸ್ವಸ್ಥವಾಗಿ – ಸದೃಡವಾಗಿರವಾಗಿರಬೇಕೆ0ದರೆ ದುಶ್ಚಟಗಳನ್ನು ತ್ಯಜಿಸಿ , ತಂಬಾಕು ಬಿಸಾಕಿ ಔಷಧೀ ಗುಣವುಳ್ಳ ವಿಳ್ಳೆದೆಲೆ ಸೇವಿಸಿ ಎಂದರು. ಬೆವರು ಸುರಿಸಿ ದುಡಿಯುವ ನಾವು ಈ ಅಪಾಯಕಾರಿ ತಂಬಾಕುಉತ್ಪನ್ನಗಳಿಗೆದಾಸರಾಗಿ ಮಾರಕ ರೋಗಗಳಿಗೆ ತುತ್ತಾಗದೆ ಆರೋಗ್ಯಯುತಸುಂದರಬದುಕು ಕಟ್ಟಿಕೊಳ್ಳಿ ಎಂದರು. ಪ್ರಾಚಾರ್ಯ ಡಾ.ಅರುಣ ಹೂಲಿ ಮಾತನಾಡಿ ಇಂದು ಅತೀ ಹೆಚ್ಚು ಜನ ತಂಬಾಕು ಉತ್ಪನ್ನಗಳಾದ ಗುಟಖಾ – ಮಾವಾಗಳಿಗೆದಾಸರಾಗಿಕ್ಯಾನ್ಸರಗೆ ಬಲಿಯಾಗಿಹೆಂಡಿರು–ಮಕ್ಕಳನ್ನು ಅನಾಥರನ್ನಾಗಿ ಮಾಡುತ್ತಿದ್ದಾರೆ. ನಿಮ್ಮ ಹೆಂಡಿರು ಮಕ್ಕಳ ಮುಖ ನೋಡಿಯಾದರೂ ತಂಬಾಕು – ಧೂಮ್ರಪಾನಗಳನ್ನು ತ್ಯಜಿಸಿ ಹಣ ಉಳಿಸಿ ನೆಮ್ಮದಿಯ ಜೀವನ ಸಾಗಿಸಿ ಎಂದರು. ಸಮುದಾಯ ಆರೋಗ್ಯ ವಿಭಾಗದ ಪ್ರಾಧ್ಯಾಪಕಿ ಡಾ.ಅಖಿಲಾ ಹುಲ್ಲೂರ ತಂಬಾಕಿನಿಂದ ಮಾನವನಿಗೆ ಶಿರದಿಂದ – ಅಂಗುಷ್ಠದವರೆಗೆ ಆಗುವ ಆರೋಗ್ಯ ಸಮಸ್ಯೆಗಳನ್ನು ವಿವರಿಸಿ, ತಂಬಾಕಿನಿ0ದುಟಾಗುವ ಆರೋಗ್ಯ ಸಮಸ್ಯೆಗಳಿಗೆ ತಪ್ಪಿಸಲು ಧೃಡ ನಿರ್ಧಾರವೇ ಮದ್ದು ಎಂದರು. ಕಾರ್ಯಕ್ರಮದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷರಾದ ಮಹೇಶ ಅಂಗಡಿ. ವಿರೇಶ ಅಥಣಿ ಹಮಾಲರ ಯುನಿಯನ್ ಪದಾಧಿಕಾರಿಗಳು –ಸದಸ್ಯರುಗಳು ಎನ್.ಎಸ್.ಎಸ್. ಯೋಜನಾಧಿಕಾರಿ ಡಾ.ಸುನೀಲ ಭೋಸಲೆ. ಡಾ.ಸುಧೀರ ಬೆಟಗೇರಿ ಉಪಸ್ಥಿತರಿದ್ದರು.

ಡಾ.ರವಿ.ಕೋಟೆಣ್ಣವರಸ್ವಾಗತಿಸಿ–ವಂದಿಸಿದರು. ಕಾರ್ಯಕ್ರಮದಲ್ಲಿ ವೈದ್ಯ ವಿದ್ಯಾರ್ಥಿಗಳು ತಂಬಾಕುನಿಂದುಂಟಾಗುವ ಆರೋಗ್ಯ ಸಮಸ್ಯೆಗಳ ಜಾಗೃತಿ ಘೋಷಣೆಗಳನ್ನು ಕೂಗಿದರು.

# ರಕ್ತದಾನ ಮಹಾದಾನ–ಒಂದು ಹನಿ ರಕ್ತ ಜೀವ ರಕ್ಷಣೆಗೆ ಸಹಕಾರಿ: ಮಲ್ಲಿಕಾರ್ಜುನ ಸಾಸನೂರ




**ಬಾಗಲಕೋಟೆ :** ನಗರದ ಬಿ.ವ್ಹಿ.ವ್ಹಿ. ಎಸ್. ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯದ ಮತ್ತು ಆಸ್ಪತ್ರೆಯಲ್ಲಿ ಬವಿವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ರವರ ಜನ್ಮ ದಿನಾಚಾರಣೆ ಅಂಗವಾಗಿ ಹಮ್ಮಿಕೊಂಡ ರಕ್ತದಾನ ಶಿಬಿರದಲ್ಲಿ ಕಾಲೇಜು ಆಡಳಿತ ಮಂಡಳಿಯ ಕಾರ್ಯಾದ್ಯಕ್ಷ ಮಲ್ಲಿಕಾರ್ಜುನ ಸಾಸನೂರ ಮಾತನಾಡಿ ರಕ್ತದಾನ ಮಹಾದಾನ – ಒಂದು ಹನಿ ರಕ್ತ ಜೀವ ರಕ್ಷಣೆಗೆ ಸಹಕಾರಿಯಾಗಿದೆ ಕಾರಣ ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿ ಎಂದರು. ಎಸ್.ಎನ್.ಎಮ್.ಸಿ. ಯ ಕುಮಾರೇಶ್ವರ ಆಸ್ಪತ್ರೆಯ ರಕ್ತ ಭಂಡಾರದ ವೈದ್ಯಾಧಿಕಾರಿ ಡಾ.ಕೇಶವ ಕುಲಕರ್ಣಿ ರಕ್ತದಾನ ಮಹತ್ವ ಕುರಿತು ಮಾತನಾಡುತ್ತಾ ರಕ್ತದಾನ ಮಾಡುವುದರಿಂದ ದಾನಿಗಗಳಿಗೂ ಕೂಡ ಆರೋಗ್ಯ ವೃದ್ಧಿಯಾಗಲಿದೆ ಎಂದರು. ಪ್ರಾಚಾರ್ಯ ಡಾ.ಅರುಣ ಹೂಲಿ ಮಾತನಾಡಿ ಸಾವು ಬದುಕಿನ ಮಧ್ಯೆ ಹೋರಾಟ ನಡೆಸುವವರನ್ನು ಬದುಕಿಸಲು ರಕ್ತದಾನ ಮಾಡುವದು ಸಮಾಜಮುಖಿ ಕಾರ್ಯಗಳಲ್ಲಿ ಒಂದಾಗಿದೆ ವಿದ್ಯಾರ್ಥಿಗಳು ನಿಮ್ಮ ಹುಟ್ಟು ಹಬ್ಬದ ಸಂದರ್ಭಗಳಲ್ಲಿ ದುಂದು ವೆಚ್ಚ ಮಾಡದೇ ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಲು ಮುಂದಾಗಿ ಎಂದರು. 40 ವೈದ್ಯ ವಿದ್ಯಾರ್ಥಿಗಳು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿದರು. ಇದೇ ಸಂಧರ್ಭದಲ್ಲಿ ಆಸ್ಪತ್ರೆಯಲ್ಲಿಯ ರೋಗಿಗಳಿಗೆ ಹಣ್ಣುಗಳನ್ನು ವಿತರಿಸಲಾಯಿತು. ಪ್ರಾಧ್ಯಾಪಕರುಗಳಾದ ಡಾ.ರವಿ.ಎಸ್.ಕೋಟೆಣ್ಣವರ. ಡಾ.ಸುಧೀರ ಬೆಟಗೇರಿ. ಡಾ.ಅಮರೇಶ ಬಳಗಾನೂರ , ಡಾ.ಅಖಿಲಾ ಹುಲ್ಲೂರ ಎನ್.ಎಸ್.ಎಸ್. ಯೋಜನಾಧಿಕಾರಿ ಡಾ.ಸುನೀಲ ಭೋಸಲೆ. ಡಾ.ಪ್ರದೀಪ ರೆಡ್ಡಿ ಉಪಸ್ಥಿತರಿದ್ದರು.

## ಧಾರವಾಡ ಲೋಕಸಭೆ ಸಾರ್ವತ್ರಿಕ ಚುನಾವಣೆ

# ಮತ ಏಣಿಕೆ ಕೇಂದ್ರದ ಸಿದ್ದತೆ ಕುರಿತು ರಾಜಕೀಯ ಪಕ್ಷಗಳಿಗೆ ಮಾಹಿತಿ ನೀಡಿ, ಸಭೆ ಜರುಗಿಸಿದ ಚುನಾವಣಾಧಿಕಾರಿ ದಿವ್ಯ ಪ್ರಭು



**ಧಾರವಾಡ :** ಈಗಾಗಲೇ ಮೇ 7 ರಂದು ಜರುಗಿರುವ ಧಾರವಾಡ–11 ಲೋಕಸಭಾ ಮತಕ್ಷೇತ್ರದ ಚುನಾವಣೆಯ ಮತಗಳ ಏಣಿಕೆ ಕಾರ್ಯ ಜೂನ್ 4 ರಂದು ಜರುಗಲಿದ್ದು, ಮತ ಏಣಿಕೆ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಭಾರತ ಚುನಾವಣಾ ಆಯೋಗ ನೀಡಿದ್ದು, ಪ್ರತಿ ರಾಜಕೀಯ ಪಕ್ಷಗಳ ಮತ್ತು ಪಕ್ಷೇತರ ಅಭ್ಯರ್ಥಿಗಳು ತಮ್ಮ ಚುನಾವಣಾ ಏಜಂಟ, ಮತ ಏಣಿಕಾ ಏಜಂಟರಿಗೆ ಕಡ್ಡಾಯವಾಗಿ ಚುನಾವಣಾ ಆಯೋಗ ನೀಡಿರುವ ಮಾರ್ಗಸೂಚಿಗಳನ್ನು ಪಾಲಿಸುವಂತೆ ತಿಳಿಸಬೇಕೆಂದು ಚುನಾವಣಾ ಅಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಅವರು ಇಂದು ಬೆಳಿಗ್ಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಲೋಕಸಭಾ ಸಾರ್ವತ್ರಿಕ ಚುನಾವಣೆ–2024 ರ ಮತ ಏಣಿಕೆ ಪ್ರಕ್ರಿಯೆಗಳ ಕುರಿತುಅಭ್ಯರ್ಥಿಗಳಮತ್ತುರಾಜಕೀಯಪಕ್ಷಗಳ ಪ್ರತಿನಿಧಿಗಳ ಸಭೆ ಜರುಗಿಸಿ, ಮಾತನಾಡಿದರು.

ಮತ ಏಣಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅಭ್ಯರ್ಥಿಗಳು, ಚುನಾವಣಾ ಏಜಂಟರು, ಮತ ಏಣಿಕೆ ಏಜಂಟರಿಗೆ ವಾಹನ ನಿಲುಗಡೆಗೆ, ಉಪಹಾರಕ್ಕೆ ನಿಗದಿತ ಸ್ಥಳ ಗುರುತಿಸಿ, ಸಿದ್ದತೆ ಮಾಡಲಾಗಿದೆ. ಅಂದು ಮತ ಏಣಿಕಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ 144 ಕಲಂ ಅಡಿ ನಿಷೇಧಾಜ್ಞೆ ಜಾರಿಯಲ್ಲಿರುತ್ತದೆ. ಅನಗತ್ಯ ಓಡಾಟ, ಗುಂಪು ಸೇರುವುದು ಮಾಡುವಂತಿಲ್ಲ ಎಂದು ಅವರು ಹೇಳಿದರು.

ಮತ ಏಣಿಕಾ ಕೇಂದ್ರದೊಳಗೆ ಮೊಬೈಲ್ ಸೇರಿದಂತೆ ಯಾವುದೇ ರೀತಿಯ ಎಲೆಕ್ಟ್ರಾನಿಕ್ ವಸ್ತು ತರಲು ಅವಕಾಶವಿಲ್ಲ. ಯಾವುದೇ ರೀತಿಯ ಆಯುಧ, ಗುಟಕಾ, ಬೀಡಿ ಸಿಗ–ರೇಟ್, ಎಲೆ ಅಡಿಕೆ ತರುವುದನ್ನು ಸಹ ನಿರ್ಬಂಧಿಸಲಾಗಿದೆ. ಚುನಾವಣಾ ಆಯೋಗದ ಎಲ್ಲ ನಿಯಮಗಳನ್ನು ಪಾಲಿಸುವ ಮೂಲಕ ಮತ ಏಣಿಕೆ ಕಾರ್ಯ ನಿಯಮಾನುಸಾರ, ಸುಗಮವಾಗಿ ಜರುಗಲು ಅಭ್ಯರ್ಥಿಗಳು ಮತ್ತು ರಾಜಕೀಯ ಪಕ್ಷಗಳು ಸಹಕಾರ ನೀಡಬೇಕೆಂದು ಅವರು ತಿಳಿಸಿದರು.

ಜೂನ್ 4 ರಂದು ಬೆಳಿಗ್ಗೆ ಸ್ಟ್ರಾಂಗ್ ರೂಮ್ ಓಪನ್ ಮಾಡುವುದರಿಂದ ಹಿಡಿದು ಸಂಜೆ ಇವಿಎಂ ಮಷಿನ್‌ಗಳು ಭದ್ರತಾ ಕೊಠಡಿಗೆ ಹೋಗುವವರೆಗಿನ ಎಲ್ಲ ಹಂತಗಳನ್ನು ಚುನಾವಣಾಧಿಕಾರಿ ದಿವ್ಯ ಪ್ರಭು ಅವರು ಸಭೆಯಲ್ಲಿ ವಿವರಿಸಿದರು.

ಮಹಾನಗರ ಪೊಲೀಸ್ ಆಯುಕ್ತೆ ರೇಣುಕಾ ಸುಕುಮಾರ ಅವರು ಮಾತನಾಡಿ, ವಾಹನ ಪಾರ್ಕಿಂಗ್ ಸ್ಥಳ, ಪೊಲೀಸ್ ಪರಿಶೀಲನಾ ಸ್ಥಳಗಳು, ಬಂದೊಬಸ್ತ ಬಗ್ಗೆ ಸಭೆಯಲ್ಲಿ ವಿವರಿಸಿದರು.

ಸಭೆಯಲ್ಲಿ ವಿವಿಧ ಚುನಾವಣಾ ಕರ್ತವ್ಯಗಳ ನೊಡಲ್ ಅಧಿಕಾರಿಗಳಾದ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ವಿಜಯಕುಮಾರ ಆಜೂರ, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಡಾ. ಸಂತೋಷ ಬಿರಾದಾರ, ಸ್ಮಾರ್ಟ ಸಿಟಿ ಜಂಟಿ ವ್ಯವಸ್ಥಾಪಕ ಅಜೀಜ್ ದೇಸಾಯಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ರಮೇಶ.ಬಿ ಹಾಗೂ ಭಾರತೀಯ ಜನತಾ ಪಕ್ಷ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ವಿವಿಧ ಪಕ್ಷಗಳ ಮತ್ತು ಪಕ್ಷೇತರ ಅಭ್ಯರ್ಥಿಗಳು ಸಭೆಯಲ್ಲಿ ಭಾಗವಹಿಸಿದ್ದರು.

# ಮತ ಏಣಿಕೆ ನಿಮಿತ್ತ ಜೂನ್ 3 ರ ಮದ್ಯರಾತ್ರಿಯಿಂದ ಜೂನ್ 4 ರ ಮಧ್ಯರಾತ್ರಿವರೆಗೆ ಮದ್ಯಪಾನ, ಮದ್ಯ ಮಾರಾಟ, ಮದ್ಯ ಸಾಗಾಣಿಕೆ, ಮದ್ಯ ಸಂಗ್ರಹಣೆ ನಿಷೇಧಿಸಿ ಜಿಲ್ಲಾಧಿಕಾರಿ ಆದೇಶ



**ಧಾರವಾಡ :** ಜೂನ್ 4 ರಂದು ಮತ ಏಣಿ–ಕೆ ಕಾರ್ಯವು ಮುಕ್ತವಾಗಿ ಮತ್ತು ಶಾಂತಿಯುತವಾಗಿ ಜರುಗುವ ಹಿನ್ನಲೆಯಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಮತದಾನ ಪೂರ್ವ ದಿನ ಮತ್ತು ಮತ ಏಣಿಕೆ ದಿನ ಅಂದರೆ ಜೂನ್ 3, 2024 ರ ಮದ್ಯರಾತ್ರಿಯಿಂದ ಜೂನ್ 4, 2024 ರ ಮದ್ಯರಾತ್ರಿವರೆಗೆ ಜಿಲ್ಲೆಯಾದ್ಯಂತ ಮದ್ಯಪಾನ, ಮದ್ಯಮಾರಾಟ, ಮದ್ಯ ಸಾಗಾಣಿಕೆ ಮತ್ತು ಮದ್ಯ ಸಂಗ್ರಹಣೆಯನ್ನು ನಿಷೇಧಿಸಿ, ಜೂನ್ 3 ಮತ್ತು ಜೂನ್ 4 ರಂದು ಶುಷ್ಕ ದಿವಸಗಳೆಂದು ಘೋಷಿಸಿ, ಜಿಲ್ಲಾಧಿಕಾರಿ ಆಗಿರುವ ಜಿಲ್ಲಾ ದಂಡಾಧಿಕಾರಿ ದಿವ್ಯ ಪ್ರಭು ಅವರು ಆದೇಶಿಸಿದ್ದಾರೆ.

ಧಾರವಾಡ ಜಿಲ್ಲೆಯ ಎಲ್ಲ ವಿಧಾನ ಸಭಾ ಮತ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಆದೇಶ ಜಾರಿಗೊಳಿಸಲು ಜಿಲ್ಲಾಧಿಕಾರಿಗಳು ನಿರ್ದೇಶಿಸಿದ್ದಾರೆ.

ಆದೇಶ ಜಾರಿ ಸಮಯದಲ್ಲಿ ಯಾವತ್ತೂ ಭಾರತೀಯ ತಯಾರಿಕೆಯ ಮದ್ಯದ ಅಂಗಡಿಗಳು, ಬಿಯರ್, ಬಾರ್‌ಗಳು, ಕ್ಲಬ್‌ಗಳು, ಮತ್ತು ಮದ್ಯದ ಡಿಪೋಗಳನ್ನು ಮುಚ್ಚತಕ್ಕದ್ದು ಇದಲ್ಲದೇ ಪರಿಸ್ಥಿತಿಗೆ ಅನುಗುಣವಾಗಿ ಸಾರ್ವಜನಿಕ ಶಾಂತತೆಯನ್ನು ಕಾಯ್ದುಕೊಳ್ಳುವ ಹಿತದೃಷ್ಟಿಯಿಂದ ವಲಯ ಅಬಕಾರಿ ಇನಸ್ಪೆಕ್ಟರ್‌ರು, ಉಪವಿಭಾಗದ ಅಬಕಾರಿ ಅಧೀಕ್ಷಕರು ಅವಶ್ಯಕತೆ ಕಂಡು ಬಂದಲ್ಲಿ ಶಾಂತಿ ಪಾಲನೆಗೆ ಸೂಕ್ತ ಕ್ರಮ ಕೈಗೊಳ್ಳಲು ಮತ್ತು ಆದೇಶವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅವರು ಆದೇಶದಲ್ಲಿ ತಿಳಿಸಿದ್ದಾರೆ.

# ಜೀವನದಲ್ಲಿ ಒಳ್ಳೆಯ ಕಾರ್ಯಗಳು ಶಾಶ್ವತ



**ರಬಕವಿ–ಬನಹಟ್ಟಿ:** ಸೇವಾಅವಧಿಯಲ್ಲಿಉತ್ತಮವಾಗಿ ಸೇವೆ ಸಲ್ಲಿಸುವುದು ಮಹತ್ವದ್ದಾಗಿದೆ. ಸೇವಾ ಅವಧಿಯಲ್ಲಿ ನಾವು ಸಲ್ಲಿಸಿದ ಒಳ್ಳೆಯ ಕಾರ್ಯಗಳು ಶಾಶ್ವತವಾಗಿರುತ್ತವೆ ಎಂದು ಇಲ್ಲಿನ ಜನತಾ ಶಿಕ್ಷಣ ಸಂಘದ ಆಡಳಿತ ಮಂಡಳಿಯ ಸದಸ್ಯ ದುಂಡಪ್ಪ ಮಾಚಕನೂರ ತಿಳಿಸಿದರು.

ಶುಕ್ರವಾರ ಇಲ್ಲಿನ ತಮ್ಮಣ್ಣಪ್ಪ ಚಿಕ್ಕೋಡಿ ಕಾಲೇಜಿನ ಗ್ರಂಥಪಾಲಕ ಪ್ರೊ. ವೈ. ಬಿ. ಕೊರಡೂರ ಸೇವಾ ನಿವೃತ್ತರಾದಹಿನ್ನೆಲೆಯಲ್ಲಿಹಮ್ಮಿಕೊಂಡಬೀಳ್ಕೊಡುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆಡಳಿತ ಮಂಡಳಿಯ ಸದಸ್ಯ ಶಂಕರ ಸೋರಗಾಂವಿ ಮಾತನಾಡಿ, ಸುಸಜ್ಜಿತವಾದ ಗ್ರಂಥಾಲಯವನ್ನು ನಿರ್ಮಾಣಮಾಡಿದ್ದು,ಕಾಲೇಜಿಗೆಭೇಟಿನೀಡುವಎಲ್ ಐ ಸಿ ಮತ್ತು ನ್ಯಾಕ್ ತಂಡಗಳು ಗ್ರಂಥಾಲಯದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿರುವುದು ಹೆಮ್ಮೆಯ ಸಂಗತಿಯಾಗಿದೆ. ವಿಶ್ವ ವಿದ್ಯಾಲಯದ ಮಟ್ಟದ ಗ್ರಂಥಾಲಯ ಬನಹಟ್ಟಿಯ ಕಾಲೇಜಿನಲ್ಲಿದೆ ಎಂಬುದು ಹೆಮ್ಮೆ. ಶ್ರೇಷ್ಠ ಮಟ್ಟದ ಗ್ರಂಥಾಲಯ ನಿರ್ಮಾಣ ಮಾಡುವಲ್ಲಿ ಕೊರಡೂರರ ಪಾತ್ರ ಮಹತ್ವದ್ದಾಗಿದೆ ಎಂದರು.

ನಿವೃತ್ತರಾದ ಪ್ರೊ. ವೈ. ಬಿ. ಕೊರಡೂರ ಮಾತನಾಡಿ, ಗ್ರಂಥಾಲಯಗಳು ಕಾಲೇಜಿನ ಮಹತ್ವದ ಅಂಗವಾಗಿದೆ. ಗ್ರಂಥಾಲಯಗಳ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿಯ ಸಹಾಯ ಮತ್ತು ಸಹಕಾರ ಮುಖ್ಯವಾಗಿರುತ್ತದೆ. ಗ್ರಂಥಾಲಯಗಳು ಇಂದು ಕೇವಲ ಕಾಲೇಜಿನ ಪಠ್ಯಪುಸ್ತಕಗಳ ಓದಿಗೆ ಮಾತ್ರ ಸಿಮೀತವಾಗಿರದೆ ಅದು ಮಾಹಿತಿ ಕೇಂದ್ರವಾಗಿ ಕಾರ್ಯ ಮಾಡುತ್ತಿದೆ.

ರಾಮಣ್ಣ ಭದ್ರನವರ, ಡಾ. ವೀರಭದ್ರ ಕುಳ್ಳಿ, ಪ್ರಾಚಾರ್ಯ ಡಾ. ಜಿ. ಆರ್. ಜುನ್ನಾಯ್ಕರ್, ಡಾ. ಪ್ರಕಾಶ ಕೆಂಗನಾಳ, ವಿಶ್ವಜ ಕಾಡದೇವರ, ಸುರೇಶ ನಡೋಣಿ, ವಿ. ವೈ. ಪಾಟೀಲ ಮಾತನಾಡಿದರು.

ಶಂಕರ ಜಾಲಿಗಿಡದ, ಓಂಪ್ರಕಾಶ ಕಾಬ್ರಾ, ಶ್ರೀಶೈಲ ಯಾದವಾಡ, ಜಿ. ಎಸ್. ಪಾಟೀಲ, ಗೀತಾ ಸಜ್ಜನ, ರಮೇಶಮಾಗುರಿ,ಅವಿನಾಶಹಟ್ಟಿ,ಕಾವೇರಿಜಗದಾಳ, ಶಿವು ಇಟ್ನಾಳ, ರವಿ ಕುಳ್ಳಿ, ಬಸವರಾಜ ತಳವಾರ, ಮಲ್ಲು ಹೂಲಿಕಟ್ಟಿ, ಉಜ್ವಲಾ ಬಾಣಕಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



**ರಬಕವಿ–ಬನಹಟ್ಟಿ : ಬನಹಟ್ಟಿಯ ಅಕ್ಕಮಹಾದೇವಿ ಬಳಗದ ಬಸವೇಶ್ವರ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗೆ ಸಿಹಿ ಹಂಚಲಾಯಿತು. ಶಾಲಾ ಆಡಳಿತ ಮಂಡಳಿಯ ಸದಸ್ಯರಾದ ಸಾವಿತ್ರಿ ಕಾಡದೇವರ, ಪ್ರತಿಭಾ ಭದ್ರನವರ, ಅಶ್ವಿನಿ ಪಿಟಗಿ, ಲಕ್ಷ್ಮಿ ಕಾಡದೇವರ, ಮುಖ್ಯ ಶಿಕ್ಷಕ ಉಪ್ಪಲದಿನ್ನಿ, ಹಿರೇಮಠ, ಭಜಂತ್ರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.**

# ರಬಕವಿ: ಪುರದ ನಡುವೆ ಮೆರೆಯುತಿಹುದು ಬಯಲುಶೌಚ!





* **ಶಿವಾನಂದ ಮಹಾಬಲಶೆಟ್ಟಿ**

**ರಬಕವಿ–ಬನಹಟ್ಟಿ :** ಕೇಂದ್ರದ ಮೋದಿ ಸರ್ಕಾರ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ಸ್ವಚ್ಛ ಭಾರತ ಅಭಿಯಾನದ ಕುರಿತಾಗಿ ಜನರಲ್ಲಿ ಜಾಗೃತಿ ಮೂಡಿಸುವತ್ತ ಕೋಟ್ಯಂತರ ಮೊತ್ತ ವ್ಯಯಿಸುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿರುವ ಪಕ್ಷದ ಹೆಚ್ಚಿನ ಸದಸ್ಯರ ಆಡಳಿತ ಬಲ ಹೊಂದಿರುವ ರಬಕವಿ–ಬನಹಟ್ಟಿ ನಗರಸಭೆಯಲ್ಲಿ ಕೂಡ ಬಿಜೆಪಿ ಆಡಳಿತದಲ್ಲಿದ್ದು,ವಾರ್ಡ್ ನಂ :17 ರಲ್ಲಿಯೂ ಬಿಜೆಪಿ ಸದಸ್ಯ ಸಂಜಯ ತೆಗ್ಗಿ ಪ್ರತಿನಿದಿಸುತ್ತಿದ್ದರೂ, ರಬಕವಿಯ ಸಾಬೋಜಿ ಲೇನ್‌ನಲ್ಲಿನ ಬಸವ್ವಾಯಿ ದಡ್ಡಿ ಎಂದೇ ಖ್ಯಾತಿಯ ಮಹಿಳೆಯರ ಬಯಲು ಶೌಚ ಕಳೆದ 6ದಶಕಗಳಿಂದಲೂ ನಿರಾತಂಕವಾಗಿ ಇಂದಿಗೂ ಮುಕ್ತವಾಗಿದೆ.

ರಬಕವಿಯ ವಾರ್ಡ್ ನಂ :17 ರಲ್ಲಿ ಮೂವತ್ತು ಅಡಿಗೂ ಅಗಲ,ಎಂಬತ್ತು ಅಡಿಗೂ ಹೆಚ್ಚಿನ ಉದ್ದನೆಯ ಜಾಗೆಯಲ್ಲಿ ವಾರ್ಡ್‌ನ ಮುತ್ತೂರ ಗಲ್ಲಿ, ಮಟ್ಟಿಕಲ್ಲಿ ಲೇನ್, ಯಾತಗೇರಿ ಲೇನ್, ಗಿಡವೀರ ಲೇನ್ ಪ್ರದೇಶಗಳ ಮಹಿಳೆಯರಿಗೆ ಹಗಲು ಮತ್ತು ರಾತ್ರಿ ಬಹಿರ್ದೆಸೆಯ ಬಾಧೆ ತೀರಿಸುತ್ತಾ ಎಂದು ತನಗೆ ಶಾಪ ವಿಮೋಚನೆ ಆಗಲಿದೆಯೋ ಎಂದು ಕಾದು ಕುಳಿತಂತಿದೆ ಇಲ್ಲಿನ ಬಸವ್ವಾಯಿ ದಡ್ಡಿ!

ಸತತವಾಗಿ ಕನಿಷ್ಟವೆಂದರೂ 6ದಶಕಗಳ ಕಾಲ ಪರಿಸರದ ವಿನಾಶದಲ್ಲಿ ತನ್ನದೇಯಾದ ಪಾತ್ರ ನಿರ್ವಹಿಸುತ್ತಿರುವ ಈ ಬಯಲುಶೌಚಕೇಂದ್ರ ತನ್ನ ಸುತ್ತಲಿನ ಯಾತಗೇರಿ ಲೇನ್, ಮಟ್ಟಿಕಲ್ಲಿ ಲೇನ್, ಸಾಬೋಜಿ ಲೇನ್ ಮತ್ತು ಅಗಸಿಓಣಿ ಪ್ರದೇಶಗಳ ಜನತೆಗೆ ವರ್ಷದುದ್ದಕ್ಕೂ ತನ್ನ ದುರ್ನಾತ ಬೀರುತ್ತ ನಿತ್ಯ ನರಕವನ್ನೇ ಸೃಷ್ಠಿಸುತ್ತಿದೆಯಾದರೂ ಇದೂವರೆಗೆ ನಗರಸಭೆಯ ಆಡಳಿತ ವೀರರ ಗಮನಕ್ಕೆ ಬಾರದಿರುವುದು ನಿಜಕ್ಕೂ ದುರಂತವೇ ಸರಿ. ವಾರ್ಡ್ ನಂ :17ರಲ್ಲಿ ಸಾರ್ವಜನಿಕ ಶೌಚಾಲಯಗಳೇ ಇಲ್ಲ. ಅಗಸಿಓಣಿ,ಹರಿಜನ ಕೇರಿ ಪ್ರದೇಶಗಳ ಮಹಿಳೆಯರಿಗೆ ತ್ರಿಶಲಾದೇವಿ ಕಣ್ಣಿನ ಆಸ್ಪತ್ರೆಯ ಹಿಂಭಾಗದಲ್ಲಿನ ವಿಶಾಲ ಪ್ರದೇಶದಲ್ಲಿ ಬಯಲುಶೌಚಕ್ಕೆ ವ್ಯವಸ್ಥೆ ಮಾಡಲಾಗಿದೆಯಾದರೂ ಅಲ್ಲಿನ ರಸ್ತೆಯನ್ನೇ ಖಾಸಗಿಯವರು ಮುಚ್ಚಿರುವುದರಿಂದ ಮಹಿಳೆಯರು ತೆರಳಲು ರಸ್ತೆಯೇ ಇಲ್ಲದಂತಾಗಿದೆ. ಹರಿಜನ ಕೇರಿ ಬಳಿಯಲ್ಲಿ ಮಹಿಳೆಯರಿಗೆ ಶೌಚಾಲಯ ನಿರ್ಮಿಸಲಾಗಿದೆಯಾದರೂ ಅದರ ಹಣೆಬರಹವೂ ನೀರಿಲ್ಲದೆ, ಬೆಳಕಿಲ್ಲದೇ ನಿರರ್ಥಕವಾಗಿದೆ.

ಬಸವ್ವಾಯಿ ದಡ್ಡಿಯನ್ನು ಬಯಲು ಶೌಚಮುಕ್ತವಾಗಿಸಲು ಜಾಗೆಯ ಕೋಟೆಗೋಡೆಯ ಹಿಂದೆಯೇ ನೂತನವಾಗಿ ನಿರ್ಮಿಸಿರುವ ಶೌಚಾಲಯಕ್ಕೆ ಇಲ್ಲಿನ 80 ಅಡಿ ಉದ್ದ ಮತ್ತು 30 ಅಡಿಗೂ ವಿಶಾಲವಾಗಿರುವ ಸಿಸಿ ಹಾಕಿರುವದನ್ನೇ ರಸ್ತೆಯಾಗಿಸಿದಲ್ಲಿ ಮತ್ತು ನೀರು,ವಿದ್ಯುತ್ ಸಂಪರ್ಕ ನೀಡಿದಲ್ಲಿ ಮಹಿಳೆಯರು ಸರಾಗವಾಗಿ ತೆರಳುವಂತಾಗುವುದಲ್ಲದೇ ಈ ಅನಿಷ್ಠಕ್ಕೂ ಅಂತ್ಯ ಹಾಡಬಹುದಾಗಿದೆ. ಸುತ್ತು ಬಳಸಿ ರಸ್ತೆಯಲ್ಲಿ ತೆರಳಬೇಕೆಂದರೆ ಸಿಸಿ ಹಾಕಿ, ಸೇತುವೆ ನಿರ್ಮಿಸಿರುವ ಬೈಪಾಸ್ ರಸ್ತೆ ಎಂಬುದು ಪುರುಷರ ಬಯಲುಶೌಚದ ಅಧೀಕೃತ ಜಾಗೆಯಾಗಿರುವುದರಿಂದ ಮಹಿಳೆಯರು ಹಿಂದೇಟು ಹಾಕಿದ ಕಾರಣ ಇದೀಗ ಪುರುಷರ ಶೌಚಾಲಯವಾಗಿದೆ. ಆದರೆ ಮಹಿಳೆಯರಿಗೆ ಈಗಲೂ ಬಸವ್ವಾಯಿ ದಡ್ಡಿಯೇ ಬಹಿರ್ದೆಸೆ ಅಡ್ಡೆಯಾಗಿದ್ದು, ಸಮಸ್ಯೆಗೆ ನೂತನ ಶೌಚಾಲಯ ನಿರ್ಮಾಣವೊಂದೇ ಪರಿಹಾರವಾಗಿದೆ. ವಾರ್ಡ್ ನಂ 17ರಲ್ಲಿ ಶೌಚಗೃಹಗಳ ಕೊರತೆಯನ್ನು ಹೊರತುಪಡಿಸಿದರೆ ಎಲ್ಲ ಸೌಕರ್ಯಗಳೂ ಇವೆ. ನಗರಸಭೆಯ ಸದಸ್ಯರು ಮತ್ತು ಅದಿಕಾರಿಗಳು ಮೊಟ್ಟಮೊದಲಿಗೆ ನಾಗರಿಕರ ಆರೋಗ್ಯ ರಕ್ಷಣೆಗಾದರೂ ಇಲ್ಲಿ ಪುರುಷರ ಮತ್ತು ಮಹಿಳೆಯರ ಆಧುನಿಕ ಶೌಚಾಲಯಗಳನ್ನು ನಿರ್ಮಿಸುವುದು ಅತ್ಯಗತ್ಯವಾಗಿದೆ. ಅಗಸಿಓಣಿ, ಕಡಾಲಕಟ್ಟಿ, ಹರಿಜನ ಕೇರಿ ಪ್ರದೇಶಗಳ ಮಹಿಳೆಯರಿಗೆ ಈಗಿರುವ ಬಯಲುಶೌಚ ಜಾಗೆಗಳಲ್ಲೇ ಶೌಚಾಲಯ ನಿರ್ಮಿಸಲು ಸಾಧ್ಯವಿದೆ. ಪುರುಷರಿಗೆ ಬೈಪಾಸ್ ರಸ್ತೆ ಎರಡೂ ಬದಿಯಲ್ಲಿ ಬಯಲುಶೌಚಕ್ಕೆ ಅಡ್ಡಿ ಪಡಿಸಿದಲ್ಲಿ ಶೌಚಕ್ಕೆ ಜಾಗೆ ತೋರಿಸಲು ಕೇಳುತ್ತಾರೆ. ಪ್ರತ್ಯೇಕವಾಗಿ ಪುರುಷರಿಗೆಂದೇ ಶೌಚಾಲಯವಿದ್ದರೂ ರಸ್ತೆಯ ಇಕ್ಕೆಲಗಳಲ್ಲಿ ನಸುಕಿನ ಜಾವ ಬಯಲು ಶೌಚ ನಿರಂತರವಾಗಿ ಸಾಗಿದೆ. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ನಗರಸಭೆಯ ಸದಸ್ಯರ ಮತ್ತು ಅದಿಕಾರಿಗಳ ಇಚ್ಛಾಶಕ್ತಿಯ ಮೇಲೆಯೇ ಇರುವುದರಿಂದ ಹಳ್ಳದ ದಂಡೆಯ ನಗರಸಭೆ ಮಾಲೀಕತ್ವದ ವಿಶಾಲ ಜಾಗೆಯಲ್ಲಿ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ಕಟ್ಟಿಸಿ ಅಲ್ಲಿ ನೀರು, ವಿದ್ಯುತ್ ಸೌಕರ್ಯ ಕಲ್ಪಿಸಿದಲ್ಲಿ ಮಾತ್ರ ಸ್ವಚ್ಛ ಭಾರತ್ ಅಭಿಯಾನ್ ನನಸಾಗಬಲ್ಲದು.ಇಲ್ಲವಾದಲ್ಲಿ ಸ್ವಚ್ಛ ಭಾರತ್ ಅಭಿಯಾನ ಹಳ್ಳ ಹಿಡಿಯೋದು ಮಾತ್ರ ಗ್ಯಾರಂಟಿ!

**ಬಸವ್ವಾಯಿ ದಡ್ಡಿಯಲ್ಲಿನ ಜಾಗೆಯನ್ನು ಪಕ್ಕದ ಪಟ್ಟಣ, ಸಾಬೋಜಿ ಮತ್ತು ಜೋತಾವರ ಮನೆಯವರೊಡನೆ ಮಾತನಾಡಿ ನಗರಸಭೆ ಅಲ್ಲಿ ಈಗಾಗಲೇ ಹಾಕಿರುವ ಸಿಸಿಯನ್ನೇ ರಸ್ತೆಯಾಗಿ ಪರಿವರ್ತಿಸಿ ನೂತನವಾಗಿ ನಿರ್ಮಿಸಿರುವ ಶೌಚಾಲಯಕ್ಕೆ ಬೆಳಕಿನ ಮತ್ತು ನೀರಿನ ವ್ಯವಸ್ಥೆ ಮಾಡಿದಲ್ಲಿ ಗಿಡವೀರ, ಮಟ್ಟಿಕಲ್ಲಿ, ಸಾಬೋಜಿ ಮತ್ತು ಯಾತಗೇರಿ ಲೇನ್ ಮಹಿಳೆಯರಿಗೆ ಅನುಕೂಲವಾಗುತ್ತದೆ. ಅಗಸಿಓಣಿ, ಹರಿಜನ ಕೇರಿ ಮತ್ತು ಕಡಾಲಕಟ್ಟಿ ಓಣಿ ಮಹಿಳೆಯರಿಗೆ ಕೃಷ್ಣಾ ರಸ್ತೆಯಲ್ಲಿನ ಬಯಲುಶೌಚದ ಜಾಗೆಯಲ್ಲಿ ಶೌಚಗೃಹ ನಿರ್ಮಿಸುವುದು ಮತ್ತು ಈಗಾಗಲೇ ಹರಿಜನಕೇರಿ ಬಳಿ ನಿರ್ಮಿಸಿರುವ ಶೌಚಾಲಯಕ್ಕೆ ನೀರಿನ ಸೌಕರ್ಯ ಒದಗಿಸುವುದು ಮುಖ್ಯವಾಗಿದೆ. ಬೈಪಾಸ್ ರಸ್ತೆಯಂತೂ ಪುರುಷರ ಬಯಲುಶೌಚ ಕೇಂದ್ರವಾಗಿದ್ದು, ನಗರಸಭೆ ಹಳ್ಳದ ಬಳಿಯ ತನ್ನ ಮಾಲೀಕತ್ವದ ಜಾಗೆಯಲ್ಲಿ ಪುರುಷರಿಗಾಗಿ ಪ್ರತ್ಯೇಕ ಶೌಚಾಲಯ ನಿರ್ಮಿಸುವತ್ತ ಮುಂದಾದರೆ ಮಾತ್ರ ಈ ನರಕಸದೃಶ ಸಮಸ್ಯೆಗೆ ಕೊನೆ ಹಾಡಬಹುದಾಗಿದೆ.**

**। ಪರಪ್ಪ ಉಮದಿ ನಾಗರಿಕರು ರಬಕವಿ.**

==========================================



**ವಾರ್ಡ್‌ನಲ್ಲಿ ಶೌಚಾಲಯ ಸಮಸ್ಯೆಯ ನಿವಾರಣೆಗೆ ಈಗಾಗಲೇ ಕ್ರಿಯಾಯೋಜನೆ ರೂಪಿಸಲಾಗಿದೆ. ಬಸವ್ವಾಯಿ ದಡ್ಡಿಗೆ ತೆರಳುವ ಮಹಿಳೆಯರ ಅನುಕೂಲತೆಗೆ ಹಿಂಬದಿಯಲ್ಲಿನ ಶೌಚಾಲಯವನ್ನು ಮುಕ್ತಗೊಳಿಸಲಾಗುತ್ತದೆ. ಅಲ್ಲಿ ಪ್ರಖರ ಬೆಳಕು ಮತ್ತು ನೀರಿನ ಸೌಕರ್ಯ ಕಲ್ಪಿಸಲು ಮತ್ತು ಬೈಪಾಸ್ ರಸ್ತೆ ಅಕ್ಕಪಕ್ಕದಲ್ಲಿ ಬಯಲುಶೌಚ ತಡೆಯಲು ಪುರುಷರ ಶೌಚಾಲಯಗಳನ್ನು ನಿರ್ಮಿಸಲು ಕೂಡ ಉದ್ದೇಶಿಸಲಾಗಿದೆ. ಪೌರಾಯುಕ್ತರು ಮತ್ತು ಅದಿಕಾರಿಗಳೊಡನೆ ಸ್ಥಳ ವೀಕ್ಷಣೆ ಮಾಡಲಾಗಿದ್ದು,ಆಯವ್ಯದ ಅನುದಾನ ಪಡೆದುಕೊಂಡು ಶೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ.**

**। ಸಂಜಯ ವೀರಪ್ಪ ತೆಗ್ಗಿ ಮಾಜಿ ನಗರಾಧ್ಯಕ್ಷರು, ಸದಸ್ಯರು,ನಗರಸಭೆ, ವಾರ್ಡ್ ನಂ: 17, ರಬಕವಿ–ಬನಹಟ್ಟಿ.**

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State